TIGHT BINDING BOOK

UNIVERSAL LIBRARY
OU_200583
UNIVERSAL LIBRARY

ಪ್ರಭಾಕರ ಕಿರಣಮಾಲಾ.

ಯಕ್ಷಗಾನ

# ರತ್ನಾವತೀ ಕಲ್ಯಾಣ


ದಿವಂಗತ ನಂದಳಿಕೆ ಲಕ್ಷ್ಮೀನಾರ್ಣಪ್ಪನವರಿಂದ

ರಚಿಸಲ್ಪಟ್ಟುದು.



ಐದನೆಯ ಮುದ್ರಣ.

ಉಡುಪಿ

ಪ. ನಾರಾಯಣಪ್ರಭುರಿಂದ

ಸ್ವಕೀಯ ಪ್ರಭಾಕರ ಮುದ್ರಾಯಂತ್ರದಲ್ಲಿ

ಮುದ್ರಿಸಿ ಪ್ರಕಟಿಸಲ್ಪಟ್ಟಿತು.



ಕಾಪಿರೈಟ್ ರಿಜಿಸ್ಟರಾಗಿದೆ.



1931.

ಬೆಲೆ 0--3--0 Price 0—3—0

# ಜೈ ಜೈ ರಾಮಕೃಷ್ಣ ಹರಿ

# जय जय रामकृष्ण हरे!

"ಜೈ ಜೈ ರಾಮಕೃಷ್ಣಹರಿ" ಎಂಬ ಮೇಲೆ ತೋರಿಸಿದ ನಮೂನೆಯಲ್ಲಿ ಮೂರು ಇಂಚು ಎತ್ತರದ ದೊಡ್ಡ ದೊಡ್ಡ ಬಹಳ ಅಂದವಾದ ಕನ್ನಡ ಮತ್ತು ಮರಾಠಿ ಅಕ್ಷರಗಳಿಂದ— 2 ಫೂಟ್ ಉದ್ದವೂ 8 ಇಂಚು ಅಗಲವೂ ಇರುವ ಕಾಗದಗಳು ನಾವು ಹೊಸತಾಗಿ ತಯಾರಿಸಿರುತ್ತೇವೆ. ಅವು ಮಠ ವ ದೇವಾಲಯಗಳಲ್ಲಿಯೂ ಮನೆ ವ ಬಂಗಲೆಗಳಲ್ಲಿಯೂ, ಅಂಗಡಿ ವ ಬಂಡಸಾಲೆಗಳಲ್ಲಿಯೂ, ವಿಶ್ರಾಂತಿ ಭವನಗಳಲ್ಲಿಯೂ, ವಾಚನಮಂದಿರಗಳಲ್ಲಿಯೂ, ಸಭಾಸದನಗಳಲ್ಲಿಯೂ ಗೋಡೆಗಳಿಗೆ ಮೇಲ್ಭಾಗದಲ್ಲಿ ಹಚ್ಚಲು ಬಹಳ ಅನುಕೂಲವಾಗಿವೆ. ಇವುಗಳನ್ನು ಹಚ್ಚುವುದರಿಂದ — ಅಲಂಕಾರವೂ, ದೇವತಾಸಾನ್ನಿಧ್ಯವೂ ಉಂಟಾಗುವುದಲ್ಲದೆ ಯಾವಾಗಲೂ ದುರ್ವಿಚಾರಗಳಿಗೆ ಮನಸ್ಸಾಗದೆ ಭಗವನ್ನಾಮಸ್ಮರಣೆಯ ಬೋಧೆಯುಂಟಾಗಿ ಅದರಿಂದ ಮನಸ್ಸಿಗೆ ಸುಖವೂ ಶಾಂತಿಯೂ ಉಂಟಾಗುತ್ತದೆ.

ಬೆಲೆ: 100ಕ್ಕೆ 2-0-0.

☞ ಸದರೀ ಮೇಲಣ ಕಾಗದ ಹಚ್ಚಿ ಅದರ ಮೇಲ್ಗಡೆಗೂ, ಕೆಳಗಡೆಗೂ ಇನ್ನೂ ಹೆಚ್ಚಿನ ಅಲಂಕಾರಕ್ಕಾಗಿ ಹಚ್ಚುವ ಮೇಲೆ ತೋರುವ (ಬಳ್ಳಿ) ಬಾರ್ಡರುಗಳಿವೆ. ದರ: 100ಕ್ಕೆ 1-0-0.

ವಿಳಾಸ:— ಪ್ರಭಾಕರ ಮುದ್ರಾಯಂತ್ರ, ಉಡುಪಿ.

॥ ಶ್ರೀಃ ॥

॥ ಶ್ರೀ ಲಕ್ಷ್ಮೀನಾರಾಯಣಃ ಪ್ರಸನ್ನಃ ॥

ಬೃಹತ್ಕಥೋಪಪುರಾಣದೊಳಗಣ

ಯಕ್ಷಗಾನ

# ರತ್ನಾವತೀ ಕಲ್ಯಾಣ

॥ ಶಾರ್ದೂಲವಿಕ್ರೀಡಿತ ವೃತ್ತ ॥

**ಶ್ರೀಲಕ್ಷ್ಮೀವರಮಬ್ಜಜಾತಪಿತರಂ । ಬಾಲಾರ್ಕ ಕೋಟಿಪ್ರಭಂ ।**
**ನೀಲೇಂದೀವರಶಾಮ ಕೋಮಲವಪುಃ । ಸಾಲಂಕೃತೋರಸ್ಥಲಂ ॥**
**ಫಾಲಾಕ್ಷಾರ್ಚಿತ ವ್ಯಾಲರಾಜಶಯನಂ । ಕಾಲಿಂಗ ಸಮ್ಮರ್ದನಂ ।**
**ಮಾಲೋಲಂ ಸುರಪಾಲಮುಖ್ಯನುತಗೋ । ಪಾಲಂ ಸದಾ ಭಾವಯೇ ॥೧॥**

॥ ರಾಗ, ನಾಟಿ, ಝಂಪೆ ॥

ಜಯತು ಜಯ ಗಣನಾಥಾ । ಜಯತೂ ಆಖೂವರೂಥಾ ॥ ಜಯತೂ ಲೋಕವಿಖ್ಯಾತಾ । ಜಯ ಭಾಗ್ಯದಾತಾ ॥೧॥ ವಿಘ್ನಮೇಘಸಮೀರಾ । ವಿಘ್ನವಿಪಿನ ಕುಠಾರಾ ॥ ವಿಘ್ನಾದಿ ಕಲುಷಹರಾ । ವಿಘ್ನಕರಾ ಧೀರಾ ॥೨॥ ಕರಿವದನ ಹರಪುತ್ರಾ । ಶರಣಜನ ನುತಿಪಾತ್ರಾ ॥ ಸುರವಿನುತ ಸುಚರಿತ್ರಾ । ಪರತರ ಪವಿತ್ರಾ ॥ ೩ ॥

॥ ಭಾಮಿನಿ ॥

ಹರಗಿರಿಜೆಯರಿಗೆರಗಿ ವಾಣೀ । ವರಗೆ ನುತಿಸಿ ಸರಸ್ವತಿಗೆ ಮುರ । ಹರಗೆ ಭಾಸ್ಕರಮುಖ್ಯ ನವಗ್ರಹಗಳಿಗೆ ಶಿರಬಾಗೀ ॥ ಗುರುವಿನಮಲ ಪದಾಂಬುಜವನನ । ವರತ ಧ್ಯಾನಿಸಿ ಮುಂಗಥೆಯನಾ । ಮುರಹರನ ಕೃಪೆಯಿಂದ ವರ್ಣಿಪೆ ಯಕ್ಷಗಾನದಲೀ ॥ ೧ ॥

॥ ರಾಗ, ಸೌರಾಷ್ಟ್ರ, ತ್ರಿವುಡೆ ॥

ಭೂಮಿಯೊಳಗತ್ಯಧಿಕ ಕಾಶ್ಮೀರ । ಗೋಮಿನಿಪ ಶ್ರೀಹರ್ಷರಾಯಂ । ಗಾಮಹಾಮಾಂಡವ್ಯ ಮುನಿಪತಿ । ಪ್ರೇಮದಿಂದಾ ॥ ೧ ॥ ಒರೆಯುತಿರೆ ಬೃಹತ್ ಕಥಾನಕ । ವರಪುರಾಣವ ಕೇಳುತಾ ಮುನಿ । ವರನ ಪದಯುಗ ಕೆರಗಿ ಪೃಥ್ವೀ । ಶ್ವರನು ನುಡಿದಾ ॥ ೨ ॥ ಅದರೊಳಾವತ್ಸಾಖ್ಯರಾಯನು । ಪದುಮಮುಖಿ ರತ್ನಾವತಿಗೆ ತಾ । ಮದುವೆಯಾದನದೆಂತೆನುವದನು । ಮುದದೊಳೆನಗೆ ॥ ೩ ॥ ಮೊದಲರುಹಬೇಕೆನುತ ಬಿನ್ನವಿ । ಸಿದ ನೃಪಾಲನ ನೆಗೆದು ಮುದ್ದಿಸಿ । ಯದುವರನ ನೆನದುಸುರ್ದ ತಾಪಸ । ನಿಧಿಯು ಬಳಿಕಾ ॥ ೪ ॥

CHECKED 1957 ॥ ರಾಗ, ಭೈರವಿ, ಝಂಪೆ ॥

ಧಾರುಣೀಶ್ವರ ಕೇಳು । ಊರ್ವಿಯೊಳು ಮೆರೆವೈವ । ತ್ತಾರು ದೇಶದೊಳು ಭಾ । ಗೀರಥಿಯ ತಟದೀ ॥ ೧ ॥ ಚಾರುಸಂಭ್ರಮದಿ ವಿ । ಸ್ತಾರವಾಗಿರುವಂಗ । ಧಾರುಣಿಯು ವೈಭವದಿ । ಮೀರಿದುದೂಸ್ವರಕೇ ॥ ೨ ॥ ಬೆಡಗಿನಿಂ ರಂಜಿಸುವ । ಪೊಡವಿಯನು ಪ್ರೇಮದೊಳು । ದೃಢವರ್ಮನೆಂದೆನುವ । ಕಡುಪರಾಕ್ರಮಿಯೂ ॥ ೩ ॥ ಸತ್ಯಸದ್ಗುಣದಿಂದ । ಪೃಥ್ವಿಯನು ದಯದಿ ಪೊರೆ । ವೃತ್ತಿರ್ದ ಮಂತ್ರಿಜನ । ವೊತ್ತದಿಂ ಜನಪಾ ॥ ೪ ॥

॥ ವಾರ್ಧಿಕ ॥

ಇಂತು ಕೆಲಗಾಲ ಶ್ರೀಕಾಂತನ ಕಟಾಕ್ಷದೋಳ್ । ಸಂತೋಷದಿಂದ ಭೂಕಾಂತೆಯನು ಪಾಲಿಸಿರ । ಲಂತರಂಗದಿ ಪುತ್ರಸಂತತಿಗಳಿಲ್ಲೆಂಬ ಸಂತಾಪದಿಂದ ತನ್ನಾ ॥ ಮಂತ್ರಿಯೊಡನುಸುರಿ ಬಲು ಚಿಂತೆಯೊಳಗಿರುತಿರಲ್ । ಕಂತುಪಿತನಂ ಮನದಿ ಚಿಂತಿಸುತ ನಾರದ ಮ । ಹಾಂತಮುನಿ ನಡೆತಂದ ನಿಂತೆನುತಲುಸುರಿದಂ ತಾಂ ತಡೆಯದೊರ್ವ ಚರನೂ ॥ ೧ ॥

॥ ರಾಗ, ಕೇತಾರಗೌಳ, ಅಷ್ಟತಾಳ ॥

ದ್ವಾರಪಾಲಕನೆಂದ । ವಾರತೆಯನು ಕೇಳಿ । ಭೂರಿ ಸಂತೋಷದಿಂದಾ ॥ ನಾರದಮುನಿಯ ತಾ । ಭೋರನೆ ಕರೆತಂದು । ಯೇರಿಸಿ ಪೀಠವನೂ ॥ ೧ ॥ ವಂದನೆ ಗೈಯ್ಯುತ್ತ । ನಿಂದಿರೆ ಭೂಪನಾ । ಕಂದಿದಾನನವ ನೋಡಿ ॥ ಬಂದಿಹ ಭವಣೆಯೇ । ನೆಂದೆನುತಚ್ಚರಿ । ಯಿಂದ ತಾ ಬೆಸಗೊಂಡನೂ ॥ ೨ ॥

॥ ರಾಗ, ಸೌರಾಷ್ಟ್ರ, ಏಕತಾಳ ॥

ಧಾರುಣೀ ಪಾಲಕನೇ ನಿನ್ನಾ । ಚಾರುವದನ ಬಾಡಿದಂತೆ । ತೋರುತಿಹುದುಯನಗಿನ್ನದರ । ಕಾರಣ ಪೇಳೈ ॥ ೧ ॥ ಋತ್ವಿಜ ಲಾಲಿಸುವದೆನ್ನಾ । ಚಿತ್ತವೃತ್ತಿಗಳ ಸಂಪನ್ನಾ । ವಿಸ್ತರಿಸುವದೇನು ನಿನಗೆ । ಗೊತ್ತಿರದುಂಟೇ ॥ ೨ ॥ ಆದಡೇ ಪೇಳ್ವೆ ಲಾಲಿಪುದೂ । ಮೇದಿನಿಯೊಳು ಪುತ್ರರಿಲ್ಲಾ । ದಾದೆ ನರಕ ಪಾತ್ರನೆಂಬಾ । ಖೇದವೆನಗಿದೂ ॥ ೩ ॥ ಭೂವರೇಣ್ಯ ಲಾಲಿಸೈ ನೀ । ನೀವಿಧದಿ ದುಃಖಿಸುವದೇಕೆ । ಭಾವಜಾರೀ ಕರುಣದಿಂದ । ಲೀವಾ ಮಕ್ಕಳಾ ॥ ೪ ॥ ಪಿಡಿ ಈ ಚೂತಫಲವ ನಿನ್ನಾ । ಮಡದಿರನ್ನೆ ಸವಿಯುಲವಳು । ಪಡೆವಳೋರ್ವ ಸುತೆಯನೆಂದೂ । ನಡೆದ ಮುನಿರಾಯಾ ॥ ೫ ॥

|| ಭಾಮಿನಿ ||

ಮುನಿಪತಿಯು ತಾ ತೆರಳಲಿತ್ತಲು | ಮನದಿ ಹರುಷವನಾಂತು ಭೂಪನು | ವನಿತೆ ಸೌರಂಭೆಯನು ಕರೆದಿಂತೆಂದನವಳೊಡನೇ || ವನಜ ಮುಖಿಕೇಳ್ ನಾರದಾಹ್ವಯ | ಘನತಪೋನಿಧಿ ಕರುಣಿಸಿದ ಫಲ | ತಿನಲು ಪುತ್ರಿಯ ನೀ ಪಡೆವೆ ಯೆಂದಿತ್ತನಾಕ್ಷಣದೀ || ೧ ||

|| ಕಂದ ಪದ್ಯ ||

ಅನಿತರೊಳಾ ಕಾಮಿನಿ ತಾ | ಮನದೊಳಗಕ್ಕಜ ಗೊಳುತತಿ ತವಕ ದೊಳಾಗಂ || ಜನಪಾಲಕನಿತ್ತಿಹ ಫಲ | ವನು ಭುಂಜಿಸಿದಳು ಪುರಹರ ನನು ನೆನೆಯುತ್ತಂ || ೧ ||

|| ರಾಗ, ಸಾಂಗತ್ಯ, ರೂಪಕ ||

ಇಂತು ಕಾಮಿನಿಯು ಭೂ | ಕಾಂತನಿತ್ತಿಹ ಫಲ | ವಂ ತಾನು ಭುಂಜಿಸೇ ಬಳಿಕಾ || ಆಂತಳು ಗರ್ಭವಾ | ನಂತರ ಸದ್ಗುಣ | ವಂತ ನೃಪಾಲ ತಾ ತಿಳಿದೂ || ೧ || ವರ ಪುರೋಹಿತರನ್ನು | ಕರೆಸೀ ಶೀಮಂತವಾ | ನೆರವೇರಿಸುತಲಿರಲಿತ್ತಾ || ತರುಣೀ ಸೌರಂಭೆಗೆ | ಹರಿದುದು ನವ ಮಾಸಾ | ಪುರಜನರ್ಸಹಿತ ತೋಷದಲೀ || ೨ || ಇರುತಿರಲಿತ್ತ ಭೂ | ವರನರ್ಧಾಂಗಿಯು ಬಲು | ತರ ವೇದನೆಯೊಳು ತಾ ಬಳಿಕಾ || ಇರದೋರ್ವ ಗೆಳತಿಯೊ | ಳೊರೆದಳು ಮನಸಿನಾ | ಪರಿಯನಿಂತೆಂದು ವಿಸ್ತರಿಸೀ || ೩ ||

|| ರಾಗ, ನೀಲಾಂಬ್ರಿ, ತ್ರಿವುಡೆ ||

ಕೇಳಮ್ಮಾ ತನುವಿನೊಳೂ | ಇರುವ ಕಷ್ಟಾ | ತಾಳಲಿನ್ನೆಂತೂ ಪೇಳೂ || ಚಾಲವಲ್ಲಿದು ಕ್ಷಣಗಾಲಾ ತಡೆಯಲಾರೆ | ಪೇಳಿ ಕಳುಹು ಭೂಪಗೆ | ನಮಿಪೆ ಹೀಗೆ || ೧ || ಚಾನೂಕಟಿಗಳು ಕಾಣೇ | ನೋಯುತ ಲಿದೇ | ಯೇನಾ ಮಾಡಲಿ ನಾ ಜಾಣೇ || ಮಾನಿನಿಮಣಿ ಬ್ರಹ್ಮ ತಾನೆ ಗೈದಿಹ ಕೃತ್ಯ | ಕ್ಕಾನುವರಾರು ಸಖೀ | ವನಜಮುಖೀ || ೨ || ರಸನೇಂದ್ರಿ ಯವು ಕೆಟ್ಟದೇ | ವಡಲಿನೊಳು | ಹಶುತೃಷೆಗಳು ಕಟ್ಟದೇ || ಕುಸ್ಸು ಮಾಕ್ಷಿ ಪೇಳಲೇನುಸುರು ಸಿಕ್ಕಿದಂತಿದೆ | ವುಸುರುಯೇನೆನುತಾ ನೀರೇ | ಸಹಿಸಲಾರೆ || ೧ ||

|| ಭಾಮಿನಿ ||

ಅರಸ ಕೇಳ್ ಬಳಿಕಿತ್ತ ಭೂಮಿಪ | ನರಸಿ ಮರುದಿನ ಶುಭಮುಹೂರ್ತದಿ | ವರ ಸುಪುತ್ರಿಯ ಪಡದಳಾ ಮುರಹರನ ಕರುಣದೊಳೂ || ಪರಮಹರುಷದಿ ಜನಪಮಂತ್ರಿಯ | ಕರೆದು ಪೇಳಿದ ಪಟ್ಟಣವ ಶೃಂ | ಗರಿಪುದೆನೆ ಕೇಳುತ್ತ ಸಚಿವನು ಮನದಿ ಮುದವಾಂತೂ || ೧ ||

॥ ರಾಗ, ಸೌರಾಷ್ಟ್ರ, ತ್ರಿವುಡೆ ॥

ಪುರವರವ ಶೃಂಗರಿಸಿ ಮಂತ್ರೀ।ಶ್ವರನು ವಿಪ್ರಸ್ತೋಮವನು ತಾ। ಕರೆಸಿ ಕೊಡಿಸಿದ ಧನಕನಕವನು। ಹರುಷದಿಂದಾ॥೧॥ಇತ್ತಲಾ ಶಿಶುವಿಂಗೆ ದಿನಗಳು । ಹತ್ತು ಸಂದವು ಮರುದಿವಸ ಭೂ । ಪೋತ್ತಮನು ಪುಣ್ಯಾಹ ವಾಚನೆ । ಬಿತ್ತರಿಸಿದಾ ॥ ೨ ॥ ಪೊಡವಿಪಾಲಕ ಲಾಲಿಸಾ ಧರೆ । ಯೊಡೆಯ ಹನ್ನೆರಡನೆಯ ದಿನ ದ್ವಿಜ । ಗಡಣವನು ಬರಹೇಳಿ ತನ್ನಯ। ಮಡದಿ ಸಹಿತಾ ॥ ೩ ॥ ಪುಟ್ಟಿರುವ ಕುವರಿಂಗೆ ತಾ ಪೆಸ । ರಿಟ್ಟ ರತ್ನಾವತಿ ಯೆನುತ ನೃಪ। ಕಟ್ಟಳೆಯನನುಸರಿಸಿ ದ್ವಿಜರುಗ । ಳಿಷ್ಟದಿಂದಾ॥ ೪ ॥

॥ ಕಂದಪದ್ಯ ॥

ಅವನಿಪ ಲಾಲಿಸು ನಿಶಿಯೊಳ್ । ಕುವರಿಯು ರನ್ನದ ತೊಟ್ಟಿಲೊ ಳಿಡುತತಿ ಜವದಿಂ ॥ ನವಮೋಹನ್ನೆಯರಾ ನೃಪ । ಭವನದಿ ತೂಗಿದ ರೊಲವಿಂ ಪಾಡುತಲಾಗಂ ॥ ೧ ॥

॥ ರಾಗ, ಬಿಲಹರಿ, ಅಷ್ಟತಾಳ ॥

ಜೋಜೋ ವಾರಿಜಗಂಧಿ ಸುಶೀಲೇ । ಜೋಜೋ ಚಾರುಚಂದಿರ ಮುಖಿಬಾಲೇ॥ ಜೋಜೋ ಮಾರಸನ್ನಿಭೆ ಗುಣಮಾಲೇ। ಜೋಜೋ ಶ್ರೀ ರಾಮ ಸಲಹಲಿ ಮೇಲೇ । ಜೋ ಜೋ ॥ ೧ ॥ ರತ್ನಾವತಿಯೆಂಬ ರತ್ನವೆ ಜೋ ಜೋ । ಪೃಥ್ವಿಪ ದೃಢವರ್ಮ ಪುತ್ರಿಯೆ ಜೋ ಜೋ ॥ ಮಿತ್ರರಂ ಜನಿಸುಚರಿತ್ರೆಯೆ ಜೋ ಜೋ । ಚಿತ್ರಾಂಗಿ ಲಲಿತಾಬ್ಜ ನೇತ್ರೆಯೆ ಜೋ ಜೋ ॥ ಜೋ ಜೋ॥ ೨ ॥

॥ ರಾಗ, ಸುರುಟಿ, ಏಕತಾಳ ॥

ಲಾಲಿಸು ಜನನಾಥಾ । ನಿನ್ನೊಳು। ಪೇಳುವುದನು ಖ್ಯಾತಾ॥ ಬಾಲೆ ಯತಾರ್ಣಂತಂ। ಮಾಲಯ ಸೇರಲು । ಬಾಲಕಿ ತಾ ಭೂ। ಪಾಲನ ನಿಳೆಯ ದಿ ॥ ೧ ॥ ದಿನದಿನಕಾ ಕುವರೀ । ಬೆಳೆದಳು । ಘನಲೀಲೆಯದೋರೀ ॥ ಮನಸಿಜನಂಗೈ। ಗಿಣಿತನ್ನಯಕರ। ವನು ತಿರುಗಿಸಿ ನಗೆ। ಯನು ಬೀರುತ್ತಾ ॥ ೨ ॥ ಮೊಗಚಂದಿರಗಿಂತಾ । ಬಲುತರ। ಮಿಗಿಲಿರಲಿನ್ನಿಂಥಾ॥ ಮಗುವೀ ಜಗದೊಳ। ಗೊಗೆವದಿನ್ನೆಂತೆನೆ। ಮಿಗೆಸೊಬಗಿನ ನೃಪ। ರುಗಳ ಸಮೂಹದೀ ॥ ೩ ॥ ಇಂಥಾ ಬಾಲಕಿಗೇ । ವರುಷವು। ಸಂತೇಳೆಂಟ್ಹೀಗೆ ॥ ನಂತರ ಹತ್ತಾನಂತರ ಹನ್ನೆರ । ಡಂತಾಳ್ದಳು ಬಲು । ಸಂತಸದಿಂದಾ ॥ ೪ ॥ ಪದುಮುಸಖನ ತೆರದೀ । ಶೋಭಿಪ । ಪದುಮಾಕ್ಷಿಗೆ ಮುದದೀ । ಪದಿನಾರ್ಕಳೆಯಲು । ಮದಗಜಗಮನೆಯು । ಮದನನುರಿಗೆ ಬಲು । ಚೆದರಿರಲಿತ್ತಾ ॥ ೫ ॥

॥ ವಾರ್ಧಿಕ್ಯ ॥

ಭಾವಕಿಯ ಮನದೊಳಿಹ ಭಾವವನ್ನರಿತಾಗ । ಭೂವರೇಣ್ಯಂ ವ.ನದಿ ಭಾವಿಸಿದನಿವಳಿಂಗೆ । ಭಾವಜನು ಬಹುತರದೊಳೀವ ಕಷ್ಟವ ನಿನ್ನು ನಾವು ಸುಮ್ಮನೆ ಕುಳಿತಿರೆ ॥ ಆವುದಪಕೀರ್ತಿಯಿಂ ನೀ ವನಿತೆಯನು ನಿಜದಿ। ಭೂವಧು ಕುಶುಂಬಿಯೆಂಬಾವಸುಧೆಪತಿ ವತ್ಸ। ಗೀವುದೆಂದೆನುತ ಲವನೀ ವಿಧದಿ ಮಂತ್ರಿಯೊಳು ತಾ ವಿವರಿಸಿದನು ಬಿಡದೇ ॥ ೧ ॥

॥ ರಾಗ ಕಾಂಬೋಧಿ, ಝುಂಪೆತಾಳ ॥

ಅತ್ತಲವನಿಪ ತನ್ನಾ। ಪುತ್ರಿಯನು ವತ್ಸನಿಂ। ಗಿತ್ತುಲಗ್ನವ ಗೈವುದೆ ನುತಾ ॥ ಚಿತ್ತದೊಳು ಯೋಚಿಸಿರ । ಲಿತ್ತವರಕಾಳಿಂಗ । ಪೃಥ್ವಿಪಾಲಕ ಭದ್ರಸೇನಾ ॥ ೧ ॥ ಎಂದೆನುವ ನರಪತಿಯು । ವಂದಿಮಾಗಧಮಂತ್ರಿ । ಸಂದಣಿಯೊಳೊಂದುದಿನ ವೆಸೆಯೇ ॥ ಬಂದೋರ್ವ ಚರಭೂಪಗೆಂದ ಹೊರ ಬಾಗಿಲೊಳು । ಬಂದಿಹರು ಭೂದಿವಿಜರೆನಲೂ ॥ ೨ ॥ ಒಡನೆ ಕಳುಹಿದ ವಿಪ್ರ । ಗಡಣವನು ಕರತರಲು । ಪೊಡವಿ ಪಾಲಕನು ಬಳಿಕಿತ್ತಾ ॥ ತಡೆಯದ್ಯೈತಂದು ಚರ । ನುಡಿದನ್ಯೆ ನಿಮ್ಮನೊಳ । ಬಿಡಲು ಪೇಳಿರುವ ಧೊರೆಯನುತಾ ॥ ೩ ॥

॥ ಕಂದಪದ್ಯ ॥

ಬಂದವಿಪ್ರರು ಭೂಪಗೆ । ಚಂದದೊಳಾಶೀರ್ವದಿಸುತಲಿರ ಲನಿತ ರೊಳಂ ॥ ಬಂದಿಹುದೆಲ್ಲಿಂದಲಿ ನೀ । ವೆಂದೆನುತಲಿ ಬೆಸಗೊಂಡನು ವಿನಯದಿ ನೃಪತಿಂ ॥ ೧ ॥

॥ ರಾಗ, ಕೇತಾರಗೌಳ, ಅಷ್ಟತಾಳ ॥

ಪೊಡವಿಸುರರು ನೀವು । ನಡೆತಂದುದೆಲ್ಲಿಂದ । ನುಡಿಯುಬೇಕದನೆನ್ನೊಳೂ॥ ಒಡನೆ ಯಾತ್ರಿಕರಂತೆ । ಪೊರಮಟ್ಟೆರೆಲ್ಲಿಗೆ । ಬಿಡದೆ ಸೂಚಿಸುವದೈಸೇ ॥ ೧ ॥ ಲಾಲಿಸ್ಯೆ ಧಾರುಣಿ । ಪಾಲಕ ಪೇಳ್ವುದ । ಶೀಲಗುಣಾನ್ವಿತನೇ ॥ ಭೂಲಲನೆಯ ಸುತ್ತಿ । ಮೇಲೆ ನಡೆದು ಜಂನ್ಹು । ಬಾಲೆಯೊಳ್ ಸ್ನಾನಗೈದೂ ॥ ೨ ॥ ಇರದೆ ಬಂದೆವು ಮುಂದೆ। ಮೆರೆವಂಗದೇಶದ । ಧೊರೆ ದೃಢವರ್ಮನಲ್ಲಿ ॥ ಪೊರಟೆವಲ್ಲಿಂದ ನೀ । ಕರುಣಿಸೇನಾದರು । ತೆರಳಿ ಪೋಗುವೆವು ನಾವೂ ॥ ೩ ॥

॥ ರಾಗ, ಆರ್ಯ, ಸವ್ವಾಯಿ ॥

ನುಡಿಯನು ಕೇಳುತ। ಪೊಡವಿಪ ಮನದೊಳು । ಕಡು ಹರುಷದೊಳಿರೆ ಮನ್ನಿಸುತಾ ॥ ಕೊಡಿಸುತ ಬೇಕಾ। ದೊಡವೆಯ ವಿಪ್ರರ । ನುಡಿದನು

ಮಣಿಯುತ್ತ್ಹೀಗೆನುತಾ ॥ ೧ ॥ ಅನುದಿನ ತನುವನು। ತೃಣಸಮುಕೆಣಿಸುತ। ಜನಪದಗಳನೆಲ್ಲವ ತಿರುಗೀ ॥ ದಣಿದಿರುವಿರಿ ನಾಲ್ । ದಿನವಿಲ್ಲಿರುತಲಿ। ತನು ಶ್ರಮುವಳಿದಾ ಮೇಲ್ ಪೋಗೀ ॥ ೨ ॥

॥ ಭಾಮಿನಿ ॥

ಇದುಹೊರತು ಮನ್ಮನವು ನೀವ್ ತಿರು। ಗಿದ ನಗರವೈಚಿತ್ರ್ಯವನು ತಿಳಿ। ವುದಕೆ ಕೋರುವದದನು ದಯೆ ಪಾಲಿಸುವದೆನೆ ಕೇಳ್ದೂ ॥ ಅದರೊಳೋರುವ ವಿಪ್ರ ತಾನತಿ। ಮುದದೊಳುಸುರಿದ ಭೂಪ ಕೇಳ್ಳೈ । ಬುಧರು ನಾವ್ ನಮಗೇನು ತಿಳಿವುದು ಪೊಸತು ವಾರ್ತೆಗಳೂ ॥ ೧ ॥

॥ ಕಂದಪದ್ಯ ॥

ಆದಡೆ ಲಾಲಿಸು ಭೂಮಿಪ। ಮೇದಿನಿಪತಿ ದೃಢವರ್ಮಾಖ್ಯನ ಸುತೆಯೋರ್ವಳ್ ॥ ಈ ಧರೆಯೊಳಗನುಪಮುತರ । ವಾದತಿ ಸೊಬಗಿನೊಳಿರುವಳು ಗಜಗಮನೆಯುತಾ ॥ ೧ ॥

॥ ರಾಗ, ಘಂಟಾರವ, ಏಕತಾಳ ॥ [ಧಾಟಿ:- ಏನಿದು ನಿಮ್ಮಲ್ಲಿ ಸಂವಾದಾ ॥

ಚಿತ್ತವಿಸು ಭೂಪೋತ್ತಮನೆ ನುಡಿಯಾ। ದೃಢವರ್ಮರಾಯನ। ಪುತ್ರಿಯಳ ಸುಚರಿತ್ರೆಯನು ಜೀಯಾ ॥ ಇತ್ತ ಭೂಮಿಪ ಪುತ್ರರಿಲ್ಲದೆ। ಚಿತ್ತ ಚಂಚಲಿಸುತ್ತಲಿರೆ ಕೇಳ್ । ಮತ್ತೆ ನಾರದ ಋತ್ವಿಜೋತ್ತಮ। ನಿತ್ತ ಫಲವನು ಪೃಥ್ವಿಪಾಲಗೆ ॥ ೧ ॥ ಫಲವ ಭೂಮಿಪ ಲಲನೆಮಣಿಗೀಯೇ । ವಿವರಿಸುವ ಕಥನವ। ನಲವಿನಿಂದಲಿ ಲಾಲಿಸೈ ಧೊರೆಯೇ ॥ ಜಲಜಮುಖಿ ತಾ। ಮೆಲಲು ಫಲವನು। ಬಳಿಕ ಪಡದಳೀ ಸುಲಲಿತಾಂಗಿಯು। ನಳಿನನೇತ್ರೆಯ ಬೆಳದಿಹಳು ಬಹು। ಚಲುವ ಭೂಮಿಪ ನಿಳೆಯದಲ್ಲಿಯೆ ॥ ೨ ॥ ಎಂತು ವರ್ಣಿಪೆ ಕಾಂತೆಯನು ರಾಯಾ। ಭೂಮಿಪನ ಸುತೆಗುಣ। ವಂತೆ ರಾಜಿಸುವಂತ ಪರಿ ಜೀಯಾ ॥ ದಂತಿಗಾಮಿನಿ ಕಂತುಶರದುರಿ। ಯುಂತರಿಸದತಿ ಚಿಂತೆಯೊಳಗಿರ। ಲಿಂತಿದನು ನೃಪ ತಾಂ ತಿಳಿದು ಭೂ। ಕಾಂತವತ್ಸಗೆ ಗೊಂತು ಮಾಡಿಹ ॥ ೩ ॥

॥ ಭಾಮಿನಿ ॥

ತರುಣಿಯನು ವತ್ಸಾಖ್ಯನಾಗಿಹ । ನರಪತಿಗೆ ತಾನಿತ್ತು ಮದುವೆಯ । ವಿರಚಿಸಲು ಬೇಕೆನುತ ದೃಢವರ್ಮಕನ ಮನದಿಚ್ಛೇ ॥ ಅರಿತಿಹೆವು ನಾವಿಷ್ಟೆ ಯೆನುತಲಿ। ತೆರಳಿ ಪೋಗಲು ಭದ್ರಸೇನನು । ಹರುಷದಿಂದಲಿ ನುಡಿದ ತನ್ನಯ ಮಂತ್ರಿವರ್ಯನೊಳೂ ॥ ೧ ॥

**ರಾಗ, ದೇಶಿ, ಅಷ್ಟತಾಳ [ಧಾಟಿ:- ಏನೆಂದೇ । ಶಲ್ಯ । ಏನೆಂದೇ ॥**

ಕೇಳಯ್ಯಾ ! ಮಂತ್ರಿ । ಕೇಳಯ್ಯಾ ॥ ಪಲ್ಲ ॥ ಕೇಳಯ್ಯಾ ಮಂತ್ರಿ ನಾ ಪೇಳುವ ನುಡಿಯಾ । ಜಾಲವಲ್ಲಿದು ವಿಪ್ರರಾಡಿದ ಪರಿಯಾ ॥ ಕೇಳಯ್ಯಾ॥ ॥ ಅನುಪಲ್ಲ ॥ ಅಂಗದೇಶದ ನೃಪ ದೃಢವರ್ಮನೆನುತಾ। ತುಂಗವಿಕ್ರಮ ನಿಹನವನಿಂಗೆ ಮತ್ತಾ ॥ ಅಂಗಜನರಗಿಣಿಯೊಲು ಸೊಬಗಿನೊಳೂ ॥ ಭೃಂಗಕುಂತಳೆ ಪುಟ್ಟಿರುವಳಂತೆ ಕೇಳೂ ॥ ೧ ॥ ಚಂದಿರಮುಖಿಯನ್ನು ವತ್ಸಾಖ್ಯ ನೃಪಗೇ । ಚಂದದೊಳಿತ್ತು ಮದುವೆ ಮಾಳ್ಪೆ ಹೀಗೆ ॥ ಎಂದೆನುತಲಿ ಭೂಪ ಯೋಚನೆಗೈವ। ನೆಂದು ವಿಪ್ರರು ಪೇಳಿ ಪೋದರು ನಿಜವಾ ॥ ॥ ೨ ॥ ಅದರಿಂದ ನೀನು ಚಾರಕರನ್ನು ಕರೆದೂ । ಪದುಮನೇತ್ರೆಯ ನಾನಿಚ್ಛಿಪೆನೆಂದು ಬರೆದೂ ॥ ವದಗಿನೊಳಮಿತ ವಿಚಿತ್ರ ವಸ್ತುಗಳಾ । ಮುದದೆ ಕಳೀವುತ ಕಳುಹಿಸು ಕಂಚುಕಿಗಳಾ ॥ ೩ ॥ ಅಪ್ಪಣೆಯನು ಕೇಳಿ ಮಂತ್ರಿಯು ತಿಳಿದೂ । ಒಪ್ಪುವ ಪತ್ರಿಕೆಯನು ತಾನೆ ಬರೆದೂ ॥ ತಪ್ಪದೆ ದೃಢವರ್ಮನಲ್ಲಿಗೆ ಪೋಗೀ । ಒಪ್ಪಿಸಿ ಬರುವದೆಂದೆನೆ ಶಿರಬಾಗೀ ॥ ೪ ॥

**॥ ಕಂದಪದ್ಯ ॥**

ಪೊರಟಾಕ್ಷಣ ಕಂಚುಕಿಗಳ್ । ವರದೃಢವರ್ಮಾಖ್ಯನ ಪಟ್ಟಣಕತಿ ಜವದಿಂ ॥ ಬರಲಾ ಭೂಪನ ಮನ್ನಿಸು । ತಿರದುಸುರಿದನವರೊಳು ಬಂದಿಹುದೇನೆನುತಂ ॥ ೧ ॥

**॥ ರಾಗ, ತೋಡಿ, ರೂಪಕ ॥**

ಆರು ನೀವೆಲ್ಲಿಂದ ಬಂದಿರೀ ವಸ್ತುಗ । ಳ್ಯಾರು ಕೊಟ್ಟಿರುವರೆಂದೆನಲೂ ॥ ಚಾರಕರೆಂದರ್ನಮ್ಮರಿಯ ಧೊರೆ ಕಳುಹಿದ । ಚಾರುಲೇಖನ ಸಹಿತಿಂದೂ ॥ ೧ ॥ ಯೆನುತಾ ಪತ್ರಿಕೆಯನ್ನು ಕೊಡಲಾ ಭೂಪನು ಮಂತ್ರಿ। ಯನು ಕರೆದೆಂದ ವಾಚಿಪಡೇ ॥ ಅನಿತರೊಳ್ ಮಂತ್ರಿಯೂ ತೆರೆದೂ ಪತ್ರಿಕೆಯನ್ನು । ಇನಿತೆಂದು ವಾಚಿಸಿ ಪೇಳ್ದಾ ॥ ೨ ॥

**॥ ರಾಗ, ಕಾಂಬೋಧಿ, ಝಂಪೆತಾಳ ॥**

ಮಿತ್ರಾಂಬುಜಾವಳಿಗೆ ಮಿತ್ರನಂತೆಸವಂಗ । ಧಾತ್ರಿಪತಿ ದೃಢವರ್ಮನೃಪಗೇ ॥ ಉತ್ತಮಕಳಿಂಗ ಧಾರಿತ್ರಿಗೊಡೆಯನು ತಾನು । ಮಿತ್ರಭಾವದಿ ಬರೆದ ಲಿಖಿತಾ ॥ ೧ ॥ಇದು ವರೆಗೆ ನಾವು ಶ್ರೀ ಪದುಮನಾಭನ ದಯದಿ । ಪದುಳಿಗರು ಭೂಮಿಪತಿ ನಿನ್ನಾ ॥ ಸುದತಿ ಪರಿವಾರದಭ್ಯುದಯವನು ಸೂಚಿಸುತ । ಮುದದೊಳಿತ್ತಪುದುತ್ತರವನೂ ॥ ೨ ॥ ಭೂಮಿಪತಿ ಕೇಳ್ ನಿನಕಾಮಿನಿಯು ಪೆತ್ತ ಗಜ। ಗಾಮಿನಿಯ ಬೆಡಗನಾ

ತಿಳಿದೂ ॥ ಕಾಮಿಸಿಹೆನದರಿಂದ ಸೋಮ ಪ್ರಭೆಯನು ಕೊಟ್ಟು । ಪ್ರೇಮದಿಂ ವೈವಾಹವೆಸಗೂ ॥ ೩ ॥ ಈ ತೆರದಿ ಬರೆದ ಲಿಖಿತಾರ್ಥವನು ತಿಳಿದು ಭೂ । ನಾಥ ನುಡಿದನು ಸಚಿವನೊಡನೆ ॥ ಮಾತುಕೊಟ್ಟಿಹೆನು ಸುಪ್ರೀತ ವತ್ಸಾಖ್ಯನಿಂ । ಗೀ ತರುಣಿಯನು ಕೊಡುವೆನೆನುತಾ ॥ ೪ ॥ ಅದರಿಂದಲೀನೃಪನು ಬದಲು ಕುವರಿಯ ನೋಡಿ । ಮದುವೆಯಾಗುವದು ಬಲು ಲೇಸೂ ॥ ಇದಕಾಗಿ ನೃಪತಿ ದುರ್ಮುದತಾಳದಂತೆ ಬರೆ । ದು ಭದ್ರಸೇನನಿಗೆ ತಿರಿಗೀ ॥ ೫ ॥ ಬರೆದು ಕಳುಹಿಸುವದೆನಲರಿತು ಮಂತ್ರಿಯು ಬಂದ । ಚರರೊಡನೆ ಕೊಟ್ಟು ಕಳುಹಿಸಲೂ ॥ ತೆರಳಿ ಬಂದಾದೂತರರಸ ಗಭಿನಮಿಸಿ ತಂ । ದಿರುವ ಲೇಖನವಿತ್ತರಾಗಾ ॥ ೬ ॥

॥ ರಾಗ, ಕೇತಾರಗೌಳ, ಝಂಪೆತಾಳ ॥

ಧಾರುಣಿಪನೋದಿ ಲಿಖಿತಾ । ಮನದೊಳಗೆ । ಭೂರಿ ರೋಷವ ತಾಳುತಾ ॥ ವೀರ ಮಂತ್ರಿಯ ಕರೆಯುತಾ । ಮಸುರಿದನು । ವಾರತೆಯ ಹೀಗೆನ್ನುತಾ ॥ ೧ ॥ ಕೇಳಯ್ಯ ಮಂತ್ರಿವರ್ಯಾ । ಭೂಮಿಪನು । ಪೇಳಿ ಕಳುಹಿರ್ಪ ಪರಿಯಾ ॥ ಬಾಲೆಯನು ಕೊಡೆನೆನುತಲೀ । ನಮ್ಮ ಹೀ । ಯಾಳಿಸಿಹ ಗರ್ವದಲ್ಲೀ ॥ ೨ ॥ ಪೊಡವಿಪನು ವತ್ಸನಹುದೂ । ಗೋವಳರ । ಹುಡುಗರಾವ್ ಹೀಗೆನುವದೂ ॥ ಷಡನೃಪನೊಳಿರಲಿಕಿಂತೂ । ನಾವಿನ್ನು । ಹುಡುಗಿಯನು ಬಿಡುವದೆಂತೂ ॥ ೩ ॥ ಬದಲು ಕುವರಿಯ ನೋಡುತಾ । ಲಗ್ನಗೈವುದು ಎಂದು ಬರೆದ ಮತ್ತಾ ॥ ಉದಧಿಜಲಕಾರಪ್ಪಣೇ । ಭೂಪ ತಾ । ನಿದವರದಿಹನು ಸುಮ್ಮನೇ ॥ ೪ ॥ ಗೊಡವೆ ಬಿಡಬೇಕೆನುವರೇ । ಆರಾದ । ರೊಡೆತನವನಿತ್ತಿರುವರೇ ॥ ಬಡಿವಾರ ನಿಲಿಸಿ ಬಿಡುವೇ । ಅರಸನಿಗೆ । ಕಡೆಗಾಲ ತೋರಿ ಕೊಡುವೇ ॥ ೫ ॥ ಕರಿಸು ಮಾರ್ಬಲವ ನೀಗಾ । ನಾ ಪೋಗಿ । ತರುವೆ ಕುವರಿಯನು ಬೇಗಾ ॥ ಪುರವ ಮುತ್ತುತ ಭೂಪನಾ । ಗರ್ವವನು । ತರಿದು ಬರುವೆನು ಈಕ್ಷಣಾ ॥ ೬ ॥

॥ ಭಾಮಿನಿ ॥

ಎಂದೆನುತ ಭೂಮಿಪನು ಪೊರಮಡು । ವಂದವನು ಕಾಣುತ್ತ ಸಚಿವನ । ಕಂದ ಚಿತ್ರಧ್ವಜನು ತಿಳಿದಾ ನೃಪನ ಸನ್ಮುಖಕೇ ॥ ಬಂದು ಬಿನ್ನವಿಸಿದನು ಭೂಪಗೆ । ತಂದೆ ಕೇಳ್ ನೀವೇಕೆ ಪೊರಟಿರಿ ! ಪಂದ ಭೂಪನ ಗೆಲುವಡೆನುತಿಂತೆಂದನವನೊಡನೇ ॥ ೧ ॥

॥ ರಾಗ, ಮಾರವಿ, ಏಳತಾಳ ॥

ನುಡಿಯನು ಲಾಲಿಸು ಪೊಡವಿಪ ನೀ ಪೊರ । ಮಡುವದಿದೇನ್ ಘನವೂ ॥ ಬಡಕುರಿಯನು ಗೆಲುವಡೆ ಕೇಳ್ ಮೃಗಗಳ । ಒಡೆಯನು ತೆರಳುವದೇ ॥ ೧ ॥ ಅಪ್ಪಣೆಯಿತ್ತರೆ ಕ್ಷಿಪ್ರದಿ ಭೂಪನ । ನಪ್ಪಳಿಸುತ ಬಳಿಕಾ ॥ ತಪ್ಪದೆ ಹಿಡಿದೆಳತಪ್ಪೆನು ನಿಮಿಷದಿ । ಬೊಪ್ಪನೆ ಇದು ಧಿಟವೂ ॥ ೨ ॥ ಕುನ್ನಿ ನೃಪಾಲನ ಗಣ್ಯಕೆ ತರುವೆನೆ । ಮಣ್ಣಿಗೆ ಕೂಡಿಸುತಾ ॥ ಕನ್ಯೆಯ ತರುವೆನು ಸಣ್ಣವನೆನುತಲಿ । ಖಿನ್ನತ್ವವನು ಬಿಡೂ ॥ ೩ ॥

॥ ಭಾಮಿನಿ ॥

ಕೇಳುತಲಿ ಮುದವಾಂತು ಭೂಪನು । ವೀಳೆಯವ ತಾನಿತ್ತು ಕಳುಹಲು । ಮೇಲೆ ಚಿತ್ರಧ್ವಜನು ಪೊರಟಾತಾಯಿಗಭಿನಮಿಸೀ ॥ ಪೇಳಿದನು ಕೇಳ್ ಜನನಿಯಂಗನೃ । ಪಾಲನಲ್ಲಿಗೆ ಕಲಹಕ್ಕೈದುವೆ । ಲೀಲೆಯಿಂದಾಶೀರ್ವದಿಪುದೆನಗೆಂದಳವಳೊಡನೇ ॥ ೧ ॥

ರಾಗ, ನೀಲಾಂಬ್ರಿ, ಏಕತಾಳ [ಧಾಟಿ:-ನೋಡಮ್ಮಾ ಇಂಥಾ ಬಾಲನಾ ।

॥ ತಪ್ತತೈಲದಿ ದೂಡುವರೆಲೆ ಇವನಾ ॥

ಅರಿತೆ ನಿನ್ನಯ ಮನವಾ । ಸುಮ್ಮನೆ ಭೂಮಿ । ಪರೊಳು ಕಾಳಗವಗೈವಾ ॥ ಪರಿಯ ತಿಳಿಯದೆ ವ್ಯರ್ಥಾ । ಪೋಗುವೆನೆಂದು । ತೆರಳುವದೇನು ಸ್ವಾರ್ಥಾ ॥ ೧ ॥ ಕರಿಸಂಕುಲವ ಗೆಲುವೇ । ನೆನ್ನುತ ಪೋಪ । ಮರಿಸಿಂಹದೋಲ್ ಮಗುವೇ ॥ ಧುರಧೀರರೊಡನೆ ನೀನೂ । ಕಾದುವೆನೆಂಬು । ದರಿತಾಗಿ ತೋರ್ಪುದಿನ್ನೂ ॥ ೨ ॥

॥ ಭಾಮಿನಿ ॥

ತನಯ ಕೇಳದರಿಂದ ಕದನಕೆ । ಮನವಮಾಡದೆ ಕ್ಷೀರಕದಳಿಗ । ಳನು ನಿರಂತರ ಸವಿವುತಲೆ ಮನೆಯೊಳಗೆ ಇರುತಿಹುದೂ ॥ ಎನುತ ದುಗುಡದೊಳಪ್ಪಿ ಮುದ್ದಿಪ । ಜನನಿಯನು ಕಾಣುತ್ತ ನುಡಿದನು । ಸನುಮತವೆ ನೀ ತಾಯೆ ಎನ್ನನು ತಡೆವುದೆಂದೆನುತಾ ॥ ೧ ॥

ರಾಗ ನವರೋಜು ಏಕತಾಳ ॥ [ಧಾಟಿ:-ಅಣ್ಣಯ್ಯನೀ ಕೇಳೂ । ವೆ್ಖ । ಬಣ್ಣವನುತಿಳಿದೇಳೂ ॥

ಅಮ್ಮಯ್ಯಾ ಬಿಡು ದುಗುಡಾ ! ನೀ ಸುಮ್ಮಗೆ ಯೋಚಿಸಬೇಡಾ ॥ ಬೊಮ್ಮಾಮರರನು । ಒಮ್ಮೆಗೆ ಗಣಿಪೆನೆ । ಘುಮ್ಮನಾ ಭೂಪನ । ಹಮ್ಮನು ನಿಲಿಸುವೇ ॥ ೧ ॥ ಉಪ್ಪನ್ನಾ ಧರಣಿಪನೂ । ಇ । ತ್ರಿಪ್ಪ ಕಾರಣ ನಾನೂ ॥ ಒಪ್ಪದೆ ಪೋದರೆ ತಪ್ಪಲ್ಲವೆ ಮೇಣ್ । ತಪ್ಪುವ ದಾರಿಗೆ ಬಪ್ಪ ಭವಣೆ

ಗಳೂ ॥ ೨ ॥ ಇದರಿಂದ ಕೇಳವ್ವಾ । ನಾ । ನಿದಕೋ ಪೋಗುವೆ ಗೆಲುವಾ॥ ಹದನವನೆಲ್ಲವ ಮೊದಲೇ ತಿಳಿದಿಹೆ । ಬದಲೆಣಿಸದೆ ನೀ ಮುದದೊಳಗಿರುವುದು ॥ ೩ ॥

॥ ರಾಗ, ಸೌರಾಷ್ಟ್ರ ತ್ರಿವುಡೆ ॥

ಮಾತೆಯೊಡನಿಂತುಸುರುತಲಿ ವಿ।ಖ್ಯಾತ ಚಿತ್ರಧ್ವಜನು ಸಂಗರ । ಕಾತುರದಿ ಪೊರಮಟ್ಟ ತಾ ನಿ । ರ್ಭೀತಿಯಿಂದಾ ॥ ೧ ॥ಮುಂದಿಮಾರ್ಬಲ ತುರಗ ಕರಿಗಳ । ಸಂದಣಿಯನೊಡಗೊಂಡು ಸಚಿವನ । ನಂದನನು ಕಳಿಕಳಿದು ದುರ್ಗವ । ಮುಂದೆ ಬರುತಾ ॥ ೨ ॥ ಧರಣಿಪತಿ ದೃಢವರ್ಮರಾಯನ । ಪುರವ ಮುತ್ತುತ್ತಿರಲು ಕಂಡಾ । ಚರರು ಬಳಿಕೋಡುತ್ತ ಪೇಳ್ದರು । ಧೊರೆಯ ಕೂಡೇ ॥ ೩ ॥

॥ ರಾಗ, ಮುಖಾರಿ ಏಕತಾಳ ॥ [ಧಾಟಿ:- ಲಾಲೀಸಿ ಕೇಳಿಂದ್ರ ಸಂಜಾತಾ ॥

ಕೇಳಯ್ಯಾ । ದೃಢವರ್ಮ ಭೂನಾಥಾ । ನಾವೆಂಬ ಮಾತಾ । ಜಾಲವಲ್ಲಿದು ಲೋಕ ವಿಖ್ಯಾತಾ ॥ ಪೇಳುವದೇನ್ ಭೂ । ಪಾಲರ ಸೈನ್ಯವು । ಪಾಳೆಯಗೊಟ್ಟಿಹು । ದೇಳ್ಳೈ ಈಕ್ಷಣ॥ ೧ ॥ಪುರವ ಮುತ್ತುತ ನಮ್ಮನ್ನೆಲ್ಲಾ । ಲಾಲಿಸು ಸುಳ್ಳಲ್ಲಾ । ಬೆರಸೀ ಕಳುಹೀರ್ಪರವರಿನಿತೆಲ್ಲಾ॥ ಧೊರೆಯೊಡನುಸುರುತ । ಕರೆತಹುದೆನುತಲಿ । ಒರೆದೀರ್ಪರು ಭೂ।ಪರು ಇದನ್ನೆಲ್ಲಾ ॥ ೨ ॥

॥ ಕಂದಪದ್ಯ ॥

ಚರರೆಂದುದ ಕೇಳುತಲಾ । ಧರಣಿಪ ನಿಜಮಂತ್ರಿಯ ಕರದವನೊಡನಾಗಂ ॥ ಪೊರೆದನು ಕೇಳೈ ಸಚಿವನೆ । ಪರ ನೃಪರೆಮ್ಮಯ ಪುರಕ್ಕೈತಂದಿಹರೆನುತಂ ॥ ೧ ॥

॥ರಾಗ, ಸೌರಾಷ್ಟ್ರ, ಅಷ್ಟತಾಳ ॥

ಲಾಲಿಸು ನಿನ್ನೊಡನೆಂಬುವ ವಚನವಾ । ಮಂತ್ರಿ ಕೇಳೂ ॥ ಭೂಮಿ । ಪಾಲರು ಗೈದಿರುವನುಚಿತ ಕಾರ್ಯವಾ । ಮಂತ್ರಿ ಕೇಳೂ ॥ ॥ ೧ ॥ ಕಳ್ಳರ ತೆರದಲ್ಲಿ ಪುರವ ಮುತ್ತಿಹರಂತೆ । ಮಂತ್ರಿ ಕೇಳೂ ॥ ತಾವು । ಮಲ್ಲ ಸಾಹಸಿಗಳೆಂದೆಂಬ ಹಮ್ಮಿಹುದಂತೆ । ಮಂತ್ರಿ ಕೇಳೂ ॥ ॥ ೨ ॥ ವೀರಭುಜಾನ್ವಿತ ಧರಣಿಪರಾದರೆ । ಮಂತ್ರಿ ಕೇಳೂ ॥ ಇಂತು । ಚೋರರ ತೆರದೊಳು ಬರುವ ಪದ್ಧತಿಯುಂಟೆ । ಮಂತ್ರಿ ಕೇಳೂ ॥ ೩ ॥ ಕರೆಸೀಗ ನಮ್ಮಯ ಭೂರಿಮಾರ್ಬಲವನ್ನು । ಮಂತ್ರಿ ಕೇಳೂ ॥ ಹಯ । ಕರಿಪದಾತಿಗಳ ಸಮೂಹವ ತಡೆಯದೆ । ಮಂತ್ರಿ ಕೇಳೂ ॥ ೪ ॥

|| ವಾರ್ಧಿಕ ||

ಅರಸನಪ್ಪಣೆಯನ್ನು ತಿಳಿದಾಗ ಮಂತ್ರಿ ತಾ | ಕರೆಸಿದಂ ಗಜಸೇನೆ ಮಂದಿಮಾರ್ಬಲ ಸಹಿತ | ಪುರವ ಮುತ್ತಿಹ ವೀರರಂ ಗೆಲ್ದು ಪಟ್ಟಣದ ಸಿರಿಯ ರಕ್ಷಿಪಡೆ ಬಳಿಕಾ || ಧರಣಿಪಾಲಕನಿತ್ತಲಸ್ತ್ರಶಸ್ತ್ರಾದಿಗಳ | ಕರ ತಳದಿ ಧರಿಸಿ ಬೆಂಬಲವ ತಾನೊಡಗೊಂಡು | ಬರುತ ಸಂಗರಕೆ ಮುಂದೆಸೆವ ಪರಸೈನ್ಯಮಂ ಚದರಿಸಿದ ಕಡುಹಿನಿಂದಾ || ೧ ||

|| ಕಂದಪದ್ಯ ||

ಸೈನ್ಯವು ಚದರುತ್ತಿಹಪರಿ | ಯನ್ನೀಕ್ಷಿಸಿ ಚಿತ್ರಧ್ವಜ ಬಲು ಧೈರ್ಯದೊಳಂ || ತನ್ನಯ ಮಾರ್ಬಲಕಭಯವ | ಮುನ್ನೀವುತಲಿರಲರಿತಾ ಭೂಪತಿಯೊರೆದಂ || ೧ ||

|| ರಾಗ, ಭೈರವಿ, ಏಕತಾಳ ||

ಆರೆಲೊ ಘಡನೃಪ ಕುವರಾ | ಹುಲು | ಚೋರರ ತೆರದಳು ಪೋರಾ || ಭೂರಿ ಬಲವ ಸಹಿತಿಂದೂ | ಬಹ | ಕಾರಣವುಸುರೇನೆಂದೂ || || ೧ || ತರಳನೆ ನಿನಗಿದು ಹಿತವೇ | ಯಮ | ಪುರಕ್ಕೈದುವದುಯುಕುತವೇ|| ತೆರಳಿದರಿಂದ ನೀ ಪಿಂತೇ | ಮೇಣ್ | ತೆರಳಿಸುಪಿತನನು ಮುಂತೇ || ೨ || ಮರುಳುನೃಪನೆ ಕೇಳಿತ್ತಾ | ನಾವ್ | ತೆರಳಿಬಂದಿಹಪರಿ ಮತ್ತಾ || ತರಳೆ ನಿನ್ನಣುಗೆಯನ್ನೊಯ್ದು | ಭೂ | ವರ ಭದ್ರಾಖ್ಯಗಿತ್ತಪುದೂ|| ೩ || ಎನುತ ಮುತ್ತಿಹವೈ ನಿನ್ನಾ | ಸುತೆ | ಯನು ಕರದ್ಯೊವುತಲಿನ್ನಾ || ಜನಪತಿ ಗೊಪ್ಪಿಸಿ ಕಡೆಗೇ|ಪಿತ|ನನು ಕಳುಹುವೆ ನಿನ್ನೆಡೆಗೇ||೪ ||ಭಳಿರೆ ಶಭಾಸು ಮೆಚ್ಚಿದೆನೂ | ದಶ | ಗಳ ರಾವಣ ಸೀತೆಯನೂ || ಕಳವಿನೊಳ್ಯೊದೆವ ಪುರಿಗೇ | ತಾ | ತೆರಳಿದುದರಿಯೆಯಾ ಹೀಗೆ || ೫ || ಪರ ಸತಿ ಪರ ಧನಗಳಲೀ | ಮನ | ವಿರಿಸುತ ನರಕಂಗಳಲೀ || ಹೊರಳುತಲಿಹುದೇನ್ ಸ್ವಾರ್ಥಾ| ಯೇ | ತರಳನೆ ಕೆಡದಿರುವ್ಯರ್ಥಾ || ೬ || ಧರ್ಮವಿಚಾರವನರಿಯೇ | ದೃಢ | ವರ್ಮ ನಾವ್ ಬಂದಿಹ ಪರಿಯೇ || ಸುಮ್ಮನೆ ಬ್ಯಾಗಳಹದಿರೂ | ನೀ | ನಮ್ಮೊಳಗಿದನುಸುರದಿರೂ || ೭ || ಹುಡುಗನೆ ಕೇಳ್ ಕಡು ಜಡಗೇ | ಮು | ದ್ದೊಡನೀಯಲು ನಾಲಿಗಗೇ || ಕೊಡುವುದೆರುಚಿಯಿದರಂತೆ | ನಾವ್ | ನುಡಿದುದು ಸೊಗಸುವದೆಂತೇ || ೮ || ಪೊಡವಿಪ ಲಾಲಿಸು ಬರಿದೇ | ಈ | ಬಡಿವಾರದಿ ಫಲವಿಹುದೇ || ಬಿಡುವೆಯ ಕುವರಿಯ ಬೇಗಾ | ನೀ | ತೊಡಗುವೆಯಾ ರಣವೀಗಾ || ೯ ||

॥ ರಾಗ, ಭೈರವಿ, ಅಷ್ಟತಾಳ

ತರಳನೆಂದೆನುತ ಬಿಡೇ । ಗರ್ವವು ನಿನ್ನ । ಶಿರಕಡರಿಹುದು ನೋಡೆ ॥ ಅರೆ ನಿಮಿಷದಿ ನಿನ್ನ । ತರಿಯುತ್ತ ಜೈಮಿನಿ । ಪುರಕೆ ಸೇರಿಸುವೆ ನೋಡೈ ॥ ೧ ॥ ಧುರಧೀರ ನೃಪನೆನ್ನುತಾ । ಬಲ್ಲೆನು ನಾನು । ತರಳ ನಾದಡೇನ್ ಮತ್ತಾ ॥ ಸರಳಿನ ಮೊನೆಗಿನ್ನು । ಕೊರತೆ ಹೊಂದಲಿ ಕುಂಟೆ । ಪರಿಕಿಸಬಹುದೀಗಲೂ ॥ ೨ ॥ ಸಾರಿ ಕೊಲ್ಲಲು ಪಾಪವೂ । ಹೊದ್ದದು ಎಂಬ । ಕಾರಣವಾಗಿ ನಾವೂ ॥ ಈ ರೀತಿಯುಸುರಲು । ಪೋರನೆ ಮದಗರ್ವ । ವೇರಿ ತದನು ಭಂಗಿಪೇ ॥ ೩ ॥ ಎನುತಗ್ನಿ ಶರವೆಸೆಯೇ । ಚಿತ್ರಧ್ವಜ । ವನಶರದಿಂ ತರಿಯೇ ॥ ಫಣಿಯನು ಗರುಡನಿಂ । ಘನತರ ಗಿರಿಶರ । ವನು ಕುಲಿಶದಿ ಖಂಡಿಸೇ ॥ ೪ ॥ ಪೊಡವಿಪ ರೋಶದಿಂದಾ । ತಿಮಿರ ಶರ । ಬಿಡಲದ ನಿಮಿಷದಿಂದಾ ॥ ಕಡಿಯಲು ದ್ಯುಮಣಿಯಿಂ । ವಡನೆ ಖಡ್ಗವ ಗೊಂಡು । ಪೊಡೆಯಲು ಕುವರನಿತ್ತಾ ॥ ೫ ॥ ತುಂಡಿಸಲದ ಕಾಣುತ್ತಾ । ಕನಲಿ ಗದೆ । ಗೊಂಡು ಭೂಮಿಪನ ಮತ್ತಾ ॥ ಮಂಡೆಯೊಳೆರಗಲು । ಚಂಡವಿಕ್ರಮನದ । ಖಂಡನೆ ಗೈದನಾಗಾ ॥ ೬ ॥

॥ ಭಾಮಿನಿ ॥

ಈ ತೆರದಿ ಶಸ್ತ್ರಾಸ್ತ್ರಗದೆಗಳು । ರೀತಿಗೆಡೆ ಹುಡುಗನೊಳು ಪೃಥ್ವೀ। ನಾಥನಾಯುಧ ಹೀನನಾದನು ಕಣನ ಮಧ್ಯದೊಳೂ ॥ ಸೋತುದನು ತಿಳಿದಾಗ ಚಿತ್ರಸು । ಕೇತ ಭೂಪನ ಶೆರೆವಿಡಿಯೆ ವಿ । ಖ್ಯಾತ ನರಪತಿಯ ಳಲಿದನು ಬಲು ತರದ ದುಗುಡದಲೀ ॥ ೧ ॥

॥ ರಾಗ, ನೀಲಾಂಬ್ರಿ ರೂಪಕ ॥ [ಧಾಟಿ:- ಯಾತಕೆ ಮಲಗಿದೆ ರಥದೊಳು । ಮಾತುಗಳಾಡದೆ ಮೌನದಿ ॥

ಹರ ಹರವೀ ಸುಮರದಿ ನಾ । ತರಳನೊಡನೆ ಕಾದಿ ವ್ಯರ್ಥ । ಶೆರೆಯ ಬಿದ್ದೆಯನ್ನೊಳಿನಿತು । ಕರುಣ ತೋರೆದೆಯಾ ॥ ಕರುಣ ತೋರೆದೆ ಯಾ ॥ ೧ ॥ ಯಾತಕಾಗಿ ಸುತೆಯನು ಭೂ । ನಾಥ ವತ್ಸಗೀವೆನೆನುತ । ಮಾತು ಕೊಟ್ಟೆನಕಟ ಎನಗೆ । ಪ್ರೀತ ನೆನುತಲೀ ॥ ಪ್ರೀತನೆನುತಲೀ ॥ ॥ ೨ ॥ ಆರು ಎನಗಿನ್ನಿಹರು ಕ್ಯಾವ । ಧೀರರೆನುತ ಮನದಿ ಮರುಗಿ । ಧಾರುಣೀಂದ್ರ ನೆನೆದ ತನ್ನಾ । ಪೂರ್ವ ಮಿತ್ರನಾ ॥ ಪೂರ್ವಮಿತ್ರನಾ ॥ ॥ ೩ ॥ ವಿಂಧ್ಯಕೇತನೆಂಬ ಶಬರ । ವಂದ್ಯಮಿತ್ರನೀರ್ದ ನವ ಮ । ದಾಂಧ ತನದೊಳೆಂತು ಎನ್ನ । ಬಂದು ಕ್ಯಾವನೂ ॥ ಬಂದು ಕ್ಯಾವನೂ ॥ ೪ ॥ ಅಷ್ಟಭಾಗ್ಯವಿರಲು ನಮಗೆ । ಇಷ್ಟಮಿತ್ರರೆಲ್ಲರಿಹರು । ಕಷ್ಟ ಬರಲು ಮಾತ್ರ ನಮ್ಮ । ಮುಟ್ಟನೋಳ್ಪರೇ ॥ ಮುಟ್ಟನೋಳ್ಪರೇ ॥ ೫ ॥ ಕರುಣ

ಶರಧಿ ನಿನ್ನ ಪದದ । ಶರಣನೆಂಬ ಮಮತೆ ಇರಲು । ಪೊರೆಯದ್ಯಾಕೆ ಬಳಲಿಸುವೆಯ । ಬರಿದೆ ಎನ್ನನೂ ॥ ಬರಿದೆ ಎನ್ನನೂ ॥ ೬ ॥

॥ ಭಾಮಿನಿ ॥

ಭೂಮಿಪತಿ ಇಂತಳಲುವದ ನಿ। ಸ್ಸೀಮ ವಿಂಧ್ಯಾಧಿಪನು ತಿಳಿಯುತ। ತಾ ಮನದಿ ಯೋಚಿಸಿದ ಬಲುತರ ಭವಣೆಗಳ ಮತ್ತೆ ॥ ಆ ಮಹಾ ದೃಢ ವರ್ಮನೆಂಬುವ । ಗೋಮಿನಿಪಗೊದಗಿರಲು ನಮ್ಮೊಳ್ । ಪ್ರೇಮಿಗಳು ಇದ್ದೇನು ಫಲ ಫಲವಿರದ ಮರನಂತೇ ॥ ೧ ॥

॥ ಕಂದಪದ್ಯ ॥

ಎನುತಂ ಯೋಚಿಸಿ ತನ್ನಯ । ವನಿತೆಯ ಕರೆದಿನಿತುಸುರಿದನಂಗ ನೃಪಾಲಂ ॥ ಗನುಪಮ ಭವಣೆಯು ಬರಲವ । ನೆನದಿಹ ಎನ್ನನು ತೆರಳುವೆ ಕಾಳಗಕೆನುತಂ ॥ ೧ ॥

॥ ರಾಗ, ಕೇತಾರಗೌಳ । ಝಂಪೆ ॥ [ಧಾಟಿ:- ನಳಿನಾಕ್ಷಿ ಕೇಳೆ ಈಗ ॥

ದ್ವಿಪರಾಜ ಗಮನೆ ಬಾಲೇ । ಕೇಳ್ ಸರಿ। ಸೃಪವೇಣಿ ಮದನಲೋಲೇ । ಚಪಲಾಕ್ಷಿ ದೃಢವರ್ಮನೂ । ವೈರಿಯಹ । ನೃಪರೊಡನೆ ಕಾದಲಿನ್ನೂ ॥ ॥೧॥ ಸೋತ ಕಾರಣ ಎನ್ನನೂ। ನೆನದರಿಂ । ಶೀತಾಂಶು ವದನೆ ನಾನೂ ॥ ಈತತೂಕ್ಷಣ ತೆರಳುವೇ । ವೈರಿ ಬಲ । ವ್ರಾತವನು ಸದೆ ಬಡಿಯುವೇ ॥ ॥ ೨ ॥ ಜಾಣೆ ಕೇಳ್ ಮಿತ್ರನವನೂ । ಪೂರ್ವದೊಳು । ಪ್ರಾಣ ಸಲಹಿದ ಧೀರನೂ ॥ ಯೇಣಾಂಬಕಿಯೆ ಹೀಗಿರೇ । ಪೊರಮಡದೆ । ಮಾಣಲೆಂತು ಸುರು ನೀರೇ ॥ ೩ ॥ ಕಾಂತ ಲಾಲಿಪುದು ನಿನಗೇ । ಸಖನವನು । ಯೆಂತೆಂಬುದಿದನು ಎನಗೇ ॥ ನಿಂತರುಹುತಲಿ ಕದನಕೇ। ತೆರಳಯ್ಯ । ಸಂತಸವ ಬಡಿಸಿ ಮನಕೇ ॥ ೪ ॥ ಕಳಕೀರವಾಣಿ ಇದನೂ । ವಿವರಿಸಲ್ । ಕುಳಿತಿರಲು ಸಮಯವನ್ನೂ ॥ ಕಳಿವೆ ತಾನಾದಡೆಲೆಗೇ । ಸಂಕ್ಷೇಪ । ದೊಳು ಪೇಳ್ವೆ ಸಲಹಿದ ಬಗೇ ॥ ೫ ॥

॥ ವಾರ್ಧಿಕ್ಯ ॥

ನಾರಿಮಣಿ ಕೇಳ್ ಪೂರ್ವದೊಳು ನಮ್ಮ ತಪ್ಪಲನು । ಕ್ರೂರ ದೌಂಷ್ಟ್ರಕನೆಂಬ ನಿಶಿಚರನು ಮುತ್ತಿರಲು। ಭೂರಿ ಮಾರ್ಬಲ ಸಹಿತ ವೀರ ದೃಢವರ್ಮನೀ ವಾರತೆಯನರಿತು ಬರುತಾ ॥ ಘೋರ ರಕ್ಕಸನ ಸಂಹರಿಸಿ ಬಳಿಕವನ ಪರಿ । ವಾರವನು ದೆಶೆಗೆಡಿಸಿ ನಮ್ಮ ಶಿರ ಕ್ಕಾದಿಹ ವು । ದಾರ ಕ್ಷೋಣಿಪಗೊದಗದಿರಲು ಮಿತ್ರನೆ ಎನ್ನ ದೂರಲಾರನೆ ದುಗುಡದೀ ॥೧॥

॥ ರಾಗ ಅಷ್ಟ ॥ [ಧಾಟಿ:- ಯೋಸುದಿನ ಬೇಕೆನ್ನಾ ಪ್ರಾಣೇಶನಾ ಕಾಂಬುವದಕ್ಕೆ ॥

ಚದುರೆ ಚಂಪಕಸುನಾಸೆ । ಮದಿರನಯನೆ ಮಂದಹಾಸೆ । ವದಗಿನೋಳ್ ಮಾರ್ಬಲದ ಕೂಡೆ । ಕದನಕಾಗಿ ಪೋಪೆ ಪ್ರಹುಡೇ ॥ ೧ ॥

ಪ್ರಾಣಕಾಂತಾ ಲಾಲಿಸಿನ್ನಾ । ಕ್ಷೋಣಿಪ ನೀ ಪರಿಯೋಳ್ ನಿನ್ನಾ । ತಾನೆ ಸಲಹಿರಲ್ಕೆ ಪಿತ ಸ । ಮಾನನವನ ಕಾಪುದೈಸೇ ॥ ೨ ॥ ಇನೆಯು ಕೇಳ್ ನೀ ಶೀಘ್ರದೊಳಗೆ । ಮನವ ಮಾಳ್ಪುದಿತ್ತ ಕಡೆಗೇ । ಕ್ಷಣ ನಿನ್ನಗಲಿ ಬಾಳಲಾರೇ । ಯೆನುತ ಪೇಳಲ್ಯಾಕೆ ಬ್ಯಾರೆ ॥ ೩ ॥

॥ ಭಾಮಿನಿ ॥

ಕಾಮಿನಿಯು ಇನಿತುಸುರಿ ತನ್ನಯ । ಪ್ರೇಮದರಸನಿಗಸ್ತ್ರ ಶಸ್ತ್ರಗ । ಳಾಮಹಾಗದೆ ಖಡ್ಗ ತೋಮರ ಕುಂತ ಮುದ್ಗರವಾ ॥ ತಾ ಮುದದಿ ತಂದಿತ್ತು ಬಳಿಕಾ । ಹೇಮದಾರತಿ ಯೆತ್ತುತರಸಗೆ । ಭಾಮಿನಿಯು ಕಳುಹಿದಳು ವೈರಿಯ ಜಯಿಸಿ ಬಹದೆನುತಾ ॥ ೧ ॥

॥ ಕಂದಪದ್ಯ ॥

ಇತ್ತಲು ಕಾಂತೆಯು ಕಳುಹಲು । ಮತ್ತಾ ವಿಂಧ್ಯಾಧಿಪ ರಥವೇರುತ ಭರದಿಂ ॥ ಮಿತ್ರನ ಮಂಡಲ ರಜದಿಂ । ಮುತ್ತುವ ತೆರದೋಳ್ ನಡದಂ ಪಟು ಭಟರೊಡನೆ ॥ ೧ ॥

॥ ರಾಗ, ಭೈರವಿ, ತ್ರಿವುಡೆ ॥

ಬಂದನಾಗಾ । ಸಮರಕ್ಕೈ । ತಂದನಾಗಾ ॥ ಪಲ್ಲ ॥ ಬಂದನಾ ಶಬರೇಶ ಹಯಕರಿ । ಸಂದಣಿಯನೊಡಗೊಂಡು ಮಣಿಮಯ । ಸ್ಯಂದನವ ನೇರುತ್ತಲರಿಗಳ । ವೃಂದವನು ಸದೆಬಡಿದು ಮತ್ತೈಮ । ಮಂದಿರಕೆ ಕಳಹುವೆನು ನೋಡೆನು । ತೆಂದು ಹೂಂಕರಿಸುತ್ತ ಘರ್ಜಿಸಿ । ಮುಂದರಿಸುತಲಿ ರಥಿಕರನು ಧರ । ಣೀಂದ್ರನಲ್ಲಿಗೆ ವಿಂಧ್ಯಕೇತನು ॥ ಬಂದನಾಗಾ । ಸಮರಕ್ಕೈ ತಂದನಾಗಾ ॥ ೧ ॥

॥ ಭಾಮಿನಿ ॥

ಧಾರುಣೀಶ್ವರ ಲಾಲಿಸಿತ್ತಲು । ವೀರ ದೃಢವರ್ಮಕನು ಬಂದಿಹ । ಶೂರರನು ನೋಡುತ್ತ ತೋಷಿಸುತವರ ಮನ್ನಿಸುತಾ ॥ ಭೂರಿ ವೈಭವ ದಿಂದಲವನು ವಿ । ಚಾರಿಸಿದ ವಿಂಧ್ಯೇಶ್ವರನೆ ತವ । ನಾರಿಮಿತ್ರರು ಕುಶಲಿಗರೆ ಯೆನಲೆಂದನವನೊಡನೇ ॥ ೧ ॥ ಚಿತ್ತವಿಸು ಕ್ಷೋಣಿಪನೆ ತನ್ನಯ । ಮಿತ್ರಮಂಡಳಿ ಕ್ಷೇಮದಿಂದಲಿ । ರುತ್ತಿಹರು ನಿನ್ನಯ ಕಟಾಕ್ಷದಿ ಕುಶಲ ವಾರ್ತೆಗಳೂ ॥ ಅತ್ತಿರಲಿ ಶೆರೆವಿಡಿದ ಖಳ ತಾ । ನೆತ್ತಲಿಹ ತೋರೆನುತ ಘರ್ಜಿಸೆ । ಚಿತ್ರಕೇತನು ತಿಳಿದು ಮಾರ್ಮಲ ತುಸುರಿದನು ಭರದೀ ॥ ೨ ॥

॥ ರಾಗ, ಮೆಚ್ಚು, ಅಷ್ಟತಾಳ ॥

ಘಡಕುಳಿಂದಕ ಕೇಳ್ ಮದಾಂಧನೇ । ಇಂಥಾ । ಬಡಿವಾರವ್ಯಾತಕೊ ಸುಮ್ಮನೇ ॥ ಪೊಡವಿಪನನು ಯುದ್ಧ ಕಣದೊಳೂ । ಶೆರೆ । ವಿಡಿದೀರ್ವ

ವೀರ ತಾನಹೆ ಕೇಳೂ ‖ ೧ ‖ ಹುಡುಗ ಮುಚ್ಚಲಿ ಬಾಯ ಹ್ಯೊಸುವೇ । ನಿನ್ನ। ಹೊಡದು ಮಾರಿಗೆ ಹಬ್ಬ ಉಣಿಸುವೇ ‖ ಒಡನೆ ಮಿತ್ರಗೆ ತೋಷ ಬಡಿಸುವೇ । ನೋಡು । ಕಡುಗಲಿತನವೀಗ ನಿಲಿಸುವೇ ‖ ೨ ‖ ಮಿತ್ರನೆನ್ನುತ ಪಡೆವೆರಸುತ್ತಾ । ಬಂದು । ಪೃಥ್ವಿಪಗೆಣೆಯಾದ ಕೇಳಿತ್ತಾ ‖ ಧೂರ್ತನೆ ಶಿರವ ತುಂಡಿಸುತೀಗಾ । ನಿನ್ನ ಮಿತ್ರಸುತೆಗೆ ಒಪ್ಪಿಸುವೆ ಬೇಗಾ ‖ ೩ ‖ ಸಾಕು ಸಾಕೆಲೊ ಇಂಥಾ ಹಮ್ಮಿನಾ । ಬರಿ । ಕಾಕು ಮಾತೇನು ಪ್ರಯೋಜನಾ ‖ ಜೋಕೆಯೋಳ್ ಪೋಗು ನೀ ಬಂದಂತೇ । ಪೋಗಿ । ಸಾಕಿದವಗೆ ಪೇಳು ಬರುವಂತೇ ‖ ೪ ‖ ನದವನುತ್ತರಿಸದ ಪಿಸುಣನೂ । ಮಹೋ । ದಧಿಯ ದಾಟುವದೆಂತು ಉಸುರಿನ್ನೂ ‖ ಮೊದಲೆನ್ನ ಕದನದಿ ಗೆಲು ನೀನೂ । ಸಲ । ಹಿದವರ ಬಗೆಯುದಕಿನ್ನೇನೂ ‖ ೫ ‖ ಮಾತಿನೋಳ್ ಚಪಳನೆನ್ನುತ ನಾನು । ಮನಃ । ಪೂರ್ತಿ ಬಲ್ಲೆನು ಕೇಳು ನಿನ್ನನೂ ‖ ಘಾತಿಸದಿರೆ ನಾನು ಶಬರನೇ । ಮೇಣೀ । ಭೂತಳದೊಳು ಮೊಗದೋರ್ಪನೇ ‖ ೬ ‖

‖ ರಾಗ, ಶಂಕರಾಭರಣ, ಮಟ್ಟಿತಾಳ ‖

ಘಾತಿಸುವ ಸಹಾಸಿಯೆಂಬು । ದರಿತೆ ಕೇಳೆಲೋ ‖ ಈ ತತೂಕ್ಷಣದಲಿ ನಿನ್ನ । ಗೆಲುವೆ ನೋಡೆಲೋ ‖ ೧ ‖ ಬರಿದೆ ಪಂಥವ್ಯಾಕೊ ನಿನಗೆ । ತರಳ ಸುಮ್ಮನೇ ‖ ಹರಣಕ್ಯಾವ ಭಟನದಾರೊ । ವರೆಯೊ ಘಮ್ಮನೇ ‖ ೨ ‖ ಯೆನುತಲಸ್ತ್ರ ತತಿಯ ಬಿಡಲು । ಚಿತ್ರಕೇತನೂ ‖ ಕನಲಿ ಘರ್ಜಿಸುತ್ತಲದನು । ಪುಡಿಯ ಗೈದನೂ ‖ ೩ ‖ ಭಳಿರೆ ವೀರನಹೆಯೊ ಎನುತ । ವಿಂಧ್ಯಕೇತನೂ ‖ ಬಳಿಕ ನೂರು ಶರದೊಳವನ । ಧನುವ ಕಡಿದನೂ ‖ ೪ ‖

‖ ರಾಗ, ಭೈರವಿ, ಏಕತಾಳ ‖

ಚಾಪವಕಡಿಯಲ್ಕಾಗಾ । ಪ್ರತಿ । ಚಾಪವ ಕೊಂಡತಿ ಬೇಗಾ ‖ ಭಾಪೆನುತಲಿ ಶಬರನಿಗೆ । ಬಲು । ಕೊಪಿಸಿ ಶರಬಿಡಲಾಗೇ ‖ ೧ ‖ ಕಂಡಾಕ್ಷಣ ವಿಂಧ್ಯೇಶಾ । ನದ । ಖಂಡಿಸುತಲಿ ಬಲು ರೋಷಾ ‖ ಗೊಂಡಾಪೊಸ ಚಾಪವನೂ । ಮೂರ್ । ತುಂಡಿಸಿ ಕೆಡಹಿದನದನೂ ‖ ೨ ‖ ಖೂಳಕಿರಾತ ಕೇಳಿತ್ತಾ । ಧನು । ಬೀಳಲ್ಕೇನ್ ಘನಮತ್ತಾ ‖ ತೋಳಿನ ಬಲ ನೋಡೆಂದೂ । ಬಲು । ತಾಳುತ ರೋಷವನಂದೂ ‖ ೩ ‖ ಗದೆಯುನು ಗೊಳುತಾಕ್ಷಣದೀ । ಮು । ತ್ತಿದ ಶಬರೇಂದ್ರನ ಶಿರದೀ ‖ ಒದಗಿಲಿ ಚಿತ್ರಧ್ವಜನೂ । ಹೊಡೆ । ವುದ ತಿಳಿದಾಕ್ಷಣಕವನೂ ‖ ೪ ‖ ಶೆಳೆಯುಲ್ ಶಬರೇಶ್ವರನೂ । ಇದ । ತಿಳಿಯುತ ಚಿತ್ರಧ್ವಜನೂ ‖ ಝಳಪಿಸಿ ಖಡ್ಗವ ಭರದೀ ।

ಶಿರ । ಕಳಚುವೆ ನೋಡೀ ಧುರದೀ ॥ ೫ ॥ ಎಂದಾಕ್ಷಣ ಹೂಂಕರಿಸೀ । ಬರು । ವಂದವ ತಿಳಿದಾ ಸಹಸೀ ॥ ಬಂದದ ಕಸಕೊಳೆ ಜವದೀ । ಮೇಲ್ । ಕಂದ ಕೈ ಸೋತನು ಕಣದೀ ॥ ೬ ॥

॥ ಕಂದಪದ್ಯ ॥

ಇದನರಿತಾ ಶಬರೇಶಂ । ಕದನದಿ ತರಳನ ಗೆಲಿದೆನು ತಾನೆಂದೆನುತಂ ॥ ಮದಗರ್ವವ ತಾಳುತಲೊದ । ರಿದ ಬಳಿಕಾ ಸಚಿವನ ಕುವರನೊಳತಿಭರದಿಂ ॥ ೧ ॥

॥ ಭಾಮಿನಿ ॥

ಮರುಳೆ ಕೇಳ್ ರಣ ಪರಿಯನರಿಯದೆ । ಹರಿಯ ತುತ್ತಿಗೆ ಸಿಕ್ಕಿ ಬಿದ್ದಿಹ । ಕುರಿಯ ತೆರದಲಿ ಬಂದೆ ತನ್ನಲಿ ಕಾದಲೆನುತೀಗ ॥ ಕೊರಳ ಕ್ಯಾವವನೆಲ್ಲಿಹನು ಯೆನ । ಗೊರೆ ಯೆನುತ ಖಡುಗವನು ನೆಗೆಯಲು ಧರಣಿಪತಿ ಇದನರಿತು ಬಂದಿಂತೆಂದನವನೊಡನೇ ॥ ೧ ॥

॥ ರಾಗ ಕಾಂಬೋಧಿ ಅಷ್ಟತಾಳ ॥ [ಧಾಟಿ:- ಮಂತ್ರಿಗಳಿರ ಕೇಳಿರೀಗಾ ॥

ಚಿತ್ತವಿಸೀಗೆನ್ನ ಮಾತಾ । ನಿನ್ನೊಳ್ । ಬಿತ್ತರಿಪುದು ವಿಂಧ್ಯನಾಥಾ ॥ ಮತ್ತಾ ಕುವರ ಕಾದೀ ಹೊತ್ತು ಕೈಸೋತೆನೆಂ ॥ಬುತ್ತಮವೆ ಕಡೆ ಯೊಚಿಸುವದಾ । ಪತ್ತಿನೊಳಗಿಹ । ಕ್ಷತ್ರಿಪುತ್ರನ ॥೧॥ ಸಾಯಕಂಗಳನ್ನೆಲ್ಲ ಕಳಿದೂ। ಈಗ । ನಾಯಕನಾಗಿಹ ದಣಿದೂ ॥ನ್ಯಾಯವೆ ಭುಜಲಕ್ಷ್ಮೀತಾಯಿ ತೊಲಗಳೆ ಮೇಣ್ ॥ ನೋಯಿಸಲ್ಕೀ ತರಳನನು ಪರ । ರಾಯರೊರೆವರ । ನ್ಯಾಯಿ ಯೆನ್ನುತಾ ॥ ೨ ॥ ಅದರಿಂದಲಿವನ ಬಂಧನೆಯೋ । ಳಿಡು । ವುದು ಯೋಗ್ಯವೆಂಬುದಸರಿಯೋ ॥ ಇದು ಹೊರತಿನಿತಾದ । ಹದನವ ನರಿತೆವ್ಮೊ ॥ ಳೊದಗುವರು ಕಾಳಗದೊಳೀತನ । ಕದನ ಕಟ್ಟಿದ । ಚದುರ ಭೂಪರೂ ॥ ೩ ॥ ತೋರು ಶೌರ್ಯವ ವೀರರಲ್ಲಿ । ಮತ್ತೆ । ಗಾರುಗೆಡಿಸಿ ರಣದಲ್ಲಿ ॥ ಶೇರಿಸು ಖಳರನು। ಸೌರಿಯ ಪುರದೊಳೀ ॥ ಪೋರನನು ಸಂಹರಿಸದಿರು ಅವಿ । ಚಾರದೊಳು ಧುರ। ಧೀರ ಸುಮ್ಮನೇ॥೪॥

॥ ಭಾಮಿನಿ ॥

ಅರಸನಪ್ಪಣೆಯಂತೆ ಶಬರೇ । ಶ್ವರನು ಬಳಿಕಾ ಚಿತ್ರಕೇತುವ । ಶೆರೆ ಮನೆಯೊಳಿಟ್ಟೇರ್ದನತ್ತಲು ಪೋಗದೋಲಿನಿತೂ ॥ ಪರಿಕಿಸುತ ಪೊರಟಾಗಳೋರ್ವನು । ಚರನು ಬಂದಾ ಭದ್ರಸೇನನಿ । ಗೆರಗಿ ಬಿನ್ನವಿಸಿದನು ಬಹುತರ ಭಯವ ತಾಳುತಲೀ ॥ ೧ ॥

॥ ರಾಗ, ಮುಖಾರಿ, ಏಕತಾಳ ॥ [ಧಾಟಿ:- ಖಳರಾಯಗೂ ಲಾಲಿಸೈ ಬಿನ್ನಪವಾ ॥

ಲಾಲಿಸೈ ಭದ್ರಸೇನಾ ಧೊರೆಯೇ । ಸೌಭಾಗ್ಯದ ಸಿರಿಯೇ । ಲಾಲಿಸೈ ಭದ್ರಸೇನಾ ಧೊರೆಯೇ ॥ ಪಲ್ಲ ॥ ತರಳಾ ಸಚಿವ ಪುತ್ರ ತಾನೂ । ವರ ಚಿತ್ರಧ್ವಜನೂ । ಧುರದೋಳ್ ಕೆಡಹಿದ ವೀರರನ್ನೂ ॥ ಕರಿ ತುರಗವ ಸಂ। ಹರಿಸುತ ದಳವನು । ತರಣಿಸುತನ ಪುರ । ವರಕಟ್ಟುತ ಮೇಣ್ । ಮೆರದನು ಶಕ್ರನ ತರಳನ ಸುತನೋ । ಉರುವಿಕ್ರಮನಿದ ನೊರೆಯಲಿನ್ನೆಂತೂ॥ ॥ ೧ ॥ ಪೊಡವೀಪ ದೃಢವರ್ಮ ತಾನಾಗಾ । ಸಂಗರಕತಿಬೇಗಾ । ಪಡೆ ಕೂಡಿ ಬಂದು ಕಾದುತಾಗಾ ॥ ಹುಡುಗಗೆ ಶರಗಳ । ಬಿಡಲದ ಖಂಡಿಸಿ । ತಡೆಯದೆ ಭೂಪನ । ಕಡು ಹಮ್ಮುಗಳೂ । ಕೆಡುಸುತಲಿವ ಶೆರೆವಿಡಿದನು ಭೂಪನ । ವಡೆಯನೆ ಲಾಲಿಸು ಕಡೆಪರಿಗಳನೂ ॥ ೨ ॥ಬಳಿಕೋರ್ವ ಶಬರ ಸೈದಿ ರಣದಿ । ಮಾರ್ಬಲವನು ಕಣದೀ । ಗೆಲಿದೂ ಮುಂದೊತ್ತಿ ಬರಲು ಜವದೀ ॥ ತಿಳಿದಿದನೆಲ್ಲ ತ । ರಳ ರೋಷದಿ ಶರ । ಮಳೆಯನು ಗರೆವುತ । ಘಳಿಲನೆ ಶಬರನೊ । ಳಳವಿಯ ಗೊಡಲಾ ಖಳನಿವನನು ಕ್ಷಣ । ದೊಳು ಶೆರೆಪಿಡಿಯುತ ಲೆಳದ್ಯೊದಿಹನೂ ॥ ೩ ॥

॥ ಕಂದಪದ್ಯ ॥

ನುಡಿಯಂ ಕೇಳುತ ಭೂಪಂ । ಕಡೆಗಾಲದ ಮೃಡನಂದದಿ ಕೋಪಿಸಿ ಬಳಿಕಂ॥ ಘುಡಿ ಘುಡಿಸುತ ನಯನದೊಳಂ ಖಿಡಿ।ಇಡುತೆಂದನು ಮಂತ್ರಿಯೊಳತಿ ಭರದಿಂ ॥ ೧ ॥

॥ ರಾಗ, ಸೌರಾಷ್ಟ್ರ ತ್ರಿವುಡೆ ॥

ಕೇಳೆಲವೊ ಮಂತ್ರೀಶನಂಗ ನೃ । ಪಾಲನಲ್ಲಿಗೆ ಕಲಹಕೈದಿಹ । ಬಾಲಸನು ಶೆರವಿಡಿದನಂತಾ । ಖೂಳನೃಪನೂ ॥ ೧ ॥ ಇಂತರಿತು ಕಾಳಗಕೆ ಪೋಗದೆ । ಕೂಂತಿರಲ್ಕನುಚಿತವು ಈಕ್ಷಣ । ಮುಂತೆ ಹವಣಿಸು ಬಲವ ಪೊರಮುಡು । ವಂತೆ ಧುರಕೇ ॥ ೨ ॥ ಎನುತನುಜ್ಞೆಯನಿತ್ತು ಭದ್ರಾ । ಖ್ಯನು ಧನುರ್ಬಾಣವನು ಗೊಳುತಲಿ । ಮನವ ಮಾಡುತ ಪೊರಟ ದೃಢವರ್ । ಮನೊಳು ರಣಕೇ ॥ ೩ ॥ ಪೇಳಲೇನ್ ಜನನಾಥ ರಾಯನ । ಪಾಳಯವು ಪರ್ವದಿ ಸಮುದ್ರದೊ । ಳೇಳುತಿಹ ತೆರೆಯಂತೆ ನಡೆದುದು ಕಾಳಗಕ್ಕೇ ॥ ೪ ॥ ಚೂಣಿ ನಡವಬ್ಬರದೊಳಾಗಸ । ಕಾಣದಂತಿರೆ ರಜದಿ ಮತ್ತಿ । ನ್ನೇನೆನುವೆ ರಾವುತರ ಘೋಷಕೆ । ಕ್ಷೋಣಿಪಾಲಾ ॥ ೫ ॥

॥ ವಾರ್ಧಿಕ್ಯ ॥

ಧರೆಯಧಿಪ ಲಾಲಿಸೈ ಇನಿತಖಿಲ ಮಾರ್ಬಲವು । ಗಿರಿನದಂಗಳ ನುತ್ತರಿಸಿ ಮುಂದೆ ನಡೆತಂದು । ಧರಣಿಪತಿ ದೃಢವರ್ಮನಾಳ್ವ ಶೀಮೆಯ

ನರಿತು ಪೊಕ್ಕುದಾ ದುರ್ಗವನ್ನೂ ॥ ಪುರವ ಮುತ್ತುತ್ತಿರುವುದನು ತಿಳಿದು ಭೂಮಿಪತಿ । ಯರಿಗಳೊಳು ಕಾದಲ್ಕೆ ರಥಿಕರಿಂದೊಡಗೂಡಿ । ಬರುತ ಪರಸೈನ್ಯಮಂ ದೆಸೆಗೆಡಿಸುತನುವಾದ ಭದ್ರಸೇನನೊಳು ಧುರಕೇ ॥ ೧ ॥

॥ ರಾಗ, ತುಜಾವಂತು, ಮಟ್ಟಿತಾಳ ॥

ಆರೆಲೋ ನೃಪಾಲ ಕುವರನೇ । ಧೀರ ಕರಿರಥಾಶ್ವಚಯುವ । ಸೇರಿ ಬಂದು ಪುರವ ಮುತ್ತಿ । ಗಾರುಗೆಡೆಸಿ ಮುಂದುವರಿವ। ಪಾರಸತ್ವನಹೆಯೊ ಪೆತ್ತ । ವೀರನಾರು ಪೆಸರದೇನೆಲೊ । ನೀನಿರ್ಪ ನಗರ। ಕಾರು ಒಡೆಯು ನೆಂಬುದುಸುರೆಲೋ। ಬಂದಿರುವರಿಲ್ಲಿ । ಕಾರಣವನು ನುಡಿಯೊ ಬೇಗೆಲೊ ॥ ॥೧॥ ಅಂಗಜಯ್ಯನ ಸುಪದಾಬ್ಜ । ಭೃಂಗಮಿತ್ರವೃಂದ ಕುಮುದ। ತಂಗ ದಿರ ಮದಾಂಧ ನೃಪವಮಾ । ತಂಗ ಪಂಚ ವದನನೆನಿಸು । ವಂಗ ಧಾತ್ರಿ ಯೊಡೆಯನಾಗಿಹೇ । ದೃಢವರ್ಮನೆಂಬ । ತುಂಗನಾಮಧೇಯು ಪಡೆ ದಿಹೇ । ನೀ ಕಾದಲೆನುತ । ಅಂಗವರಿಯುದಿಲ್ಲಿ ಬಂದಿಹೇ ॥ ೨ ॥ ವಸುಧೆ ಪಾಲಿ ಕೇಳು ಧರೆಯೊ । ಳೆಸೆವ ವರ ಕಳಿಂಗ ಪುರದ । ರಸ ಭದ್ರಾಖ್ಯ ನೆಂದು ತನ್ನ । ಪೆಸರು ಧರಣಿಪಾಲರೊಳಗಿ । ನ್ನಸಮ ವೀರನೆಂಬುದರಿ ಯೆಯಾ । ನಾವ್‌ಬಂದ ಪರಿಯು । ನುಸುರಲೇನು ನಿನ್ನ ಕುವರಿಯಾ । ಕೊಂಡ್ಯೊದು ಲಗ್ನ । ವೆಸಗ ಬೇಕೆನುವದ ಮರತೆಯಾ । ಯಾಕೆಲೋ ವಿಚಾರ ಸುಮ್ಮನೇ ॥ ೩ ॥

॥ ರಾಗ, ಘಂಟಾರವ, ಅಷ್ಟತಾಳ ॥

ಸಾಕು ಸಾರೆಲೊ ಇನಿತು ಹೆಗ್ಗಳಿಸುವ । ದ್ಯಾಕೆ ನಿನ್ನನು ಬಡಿದು ಕಳಚುವೆ । ಪೋಕ ತೆರಳ್ಳೈ ಘಮ್ಮನೇ ॥ ೧ ॥ ತರಳನೋರ್ವನು ಬಂದು ಕಾದುತ ಮತ್ತೆ । ಶೆರೆಯೊಳಿಹ ನೀನವನ ತೆರದೊಳು । ಬರಿದೆ ಕೊಡದಿರು ಪ್ರಾಣವಾ ॥೨॥ ಮಂಕು ಭೂಪನೆ ಬಿಡು ನಿನ್ನ ಬಡಿವಾರಾ । ಶಂಕರನು ಬರಲೊಮ್ಮೆಗಾತನ । ಬಿಂಕ ನಿಲಿಸುವೆ ನಿನಿತಿರೇ ॥ ೩ ॥ ಬಗೆವೆನೇ ನಿನ್ನ ಸಮರದಿ ಹೊಡೆದುರ । ಬಗೆದು ಶಾಕಿನಿ ಡಾಕಿನಿಯರಿಗೆ । ಮಿಗಿಲು ತೋಷವ ಬಡಿಸುವೇ ॥೪॥ ಎಂದು ಕೋಲ್ಗಳ ನೆಸೆಯುಲು ಭೂಪನು । ವಂದಿರದ ತೆರನಂತೆ ಖಂಡಿಸು । ತಂದು ಮರು ಶರವೆಸೆಯುಲೂ ॥ ೫ ॥ ಭದ್ರಸೇನನು ಬಳಿಕ ರೋಷದೊಳದ । ಛಿದ್ರಿಸುತ ತಾನೆಚ್ಚ ಕಡುಹಿನೊ। ಳದ್ರಿ ಶರವನು ಭೂಪಗೇ ॥ ೬॥

॥ ಭಾಮಿನಿ ॥

ಗೋತ್ರ ಶರಹತಿಯಿಂದ ಭೂಪನು । ಧಾತ್ರಿಗೊರಗಲು ಶಬರ ರೊಡಯ ವಿ। ಚಿತ್ರತರದಸ್ತ್ರಗಳ ಧರಿಸುತ ರೋಷಮಿಗೆ ಪೇರ್ಚಿ ॥

ನೇತ್ರದೊಳು ಖಿಡಿಗೆದರಿ ಬಳಿಕಾ। ಚಿತ್ರಕಾಯನ ತೆರದಿ ಘರ್ಜಿಸಿ। ಕ್ಷತ್ರಿ ಯನಿದಿರಾಗಿ ಮುಳಿದಿಂತೆಂದನವನೊಡನೇ ॥ ೧ ॥

॥ ರಾಗ, ಶಂಕರಾಭರಣ, ಮಟ್ಟೆತಾಳ ॥

ಎಲ್ಲಿ ಪೋಪೆಯಧಮ ಮನುಜ । ನಿಲ್ಲುನೃಪನ ಗೆಲ್ದಹಮ್ಮು। ನಿಲ್ಲಿಸುವೆನು ನೋಡು ತನ್ನ। ಮಲ್ಲ ಸಾಹಸಾ ॥ ೧ ॥ ಎನುತಲಸ್ತ್ರ ಬಿಡಲು ಕ್ಷಿತಿಪ। ಮನದಿ ಕೋಪಿಸುತ್ತಲದನು। ಯಣಿಸದಾಗ ಪುಡಿಯಗೈದು। ಕನಲುತೆಂದನೂ ॥ ೨ ॥ ಕ್ಷುದ್ರ ಶಬರ ಕೇಳುಜನಪ। ಬಿದ್ದಿಹನು ಕೈ ಸೋತುರಣದಿ। ಹೊದ್ದಿಪೆನು ನೋಡವನೊಳೀಗ। ಯುದ್ಧ ರಂಗದೀ ॥ ॥ ೩ ॥ ಹುಲು ನೃಪಾಲ ಕೇಳು ಬಾಯ । ಗಳಹಲೇಕೆ ನಿನ್ನನೆಮಗೆ ॥ ತಳುವದೀಗ ಲೊಪ್ಪಿಸುವೆನು । ತಿಳಿಯನುತ್ತಲೀ ॥ ೪ ॥ ಕೂರ್ಗಣೆಗಳ ನೆಸೆಯೆ ಮಧ್ಯ। ಮಾರ್ಗದೊಳಗೆ ತರಿದು ನೃಪತಿ । ಭೋರ್ಗರೆವುತ ಲೆಸೆದ ಸರಳ। ವರ್ಗವಾಕ್ಷಣಾ॥ ೫ ॥ಮತ್ತೆ ಶಬರ ಶೂಲಧರನೋ। ಲೆತ್ತು ಕೋಪವನ್ನು ಭರದಿ। ಕತ್ತರಿಸಲು ತಿಳಿದು ಜನಪ। ಪತ್ತು ಬಾಣದೀ ॥ ॥ ೬ ॥ ತೇರ ಪುಡಿಯ ಗೈವುತವನ। ಸಾರಥಿಯನು ಸೌರಿ ಪುರಕೆ। ಸೇರಿ ಸುತ್ತ ಬಳಿಕಲೆಚ್ಚ । ನೂರುಶರವನೂ ॥ ೭ ॥ ಶರಹತಿಯೊಳು ಪಲ್ಲಕಿರಿದು। ಧರಣಿಗೊರಗೆ ಸಂಸ್ಮೃತಿಯನು। ತೊರೆದ ತೆರೆದೊಳೀರ್ದ ಕೇಳು ಧರಣಿ ಪಾಲಕಾ ॥ ೮ ॥

॥ ಕಂದಪದ್ಯ ॥

ಚಿತ್ತವಿಸೆಲೆ ವಸುಧಾಪತಿ। ಇತ್ತಾ ಶಬರನು ಮಡಿಯಲ್ ದೃಢ ವರ್ಮಂ ॥ ಭೂಪೋತ್ತಮ ಮೂರ್ಛೆಯು ತಿಳಿದೇ। ಳುತ್ತಾಕ್ಷಣ ನಡೆ ತಂದಂ ಹರಿಬಕೆ ಜವದಿಂ ॥ ೧ ॥

॥ ಭಾಮಿನಿ ॥

ಬರುತ ರಣರಂಗದೊಳು ಬಿದ್ದಿಹ। ಪರಮ ಮಿತ್ರನ ನೋಡಿ ಧರಣೀ। ಶ್ವರನು ದುಗಡದೊಳಶ್ರು ಜಲವನು ಸೂಸಿ ದುಃಖಿಸುತಾ ॥ಹರ ಹರಾ ತನಗಾಗಿರಣದೊಳು। ಹರಣ ತೆತ್ತಿಹ ವೈರಿ ಬಲಕಿ । ನ್ನರರೆ ದುರ್ಗತಿಯಿಂತಡಸಿತೆಂದೆನುತ ಮರುಗಿದನೂ ॥ ೧ ॥

॥ ರಾಗ ನೀಲಾಂಬರಿ ಆದಿತಾಳ [ಧಾಟಿ:- ನಾರಿಯು ಕೈಗಳ ನೋಡೂ । ತೋರುತಿದೇ ॥

ಅಕಟಕಟಾ ರಣಧೀರಾ। ಪ್ರಕಟಿಸಲೇನ್ ಭಯ ದೂರಾ॥ ವಿಕಟ ದೊಳೂ ಕ್ಷಿತಿತಿಲಕಾ । ಶಕುತಿಯ ಪೀರ್ದನೆ ಕೃತಕಾ ॥ ೧ ॥ ಎನ್ನನು ಕಾಯಲು ಬಂದೂ। ಚನ್ನವೆ ಮೌನವು ಇಂದೂ।ಇನ್ಯಾರೂ ತನಗಿಹರೈ। ಸನ್ಮಿತ್ರಾ ಯೆನಗರುಹೈ॥೨॥ ಯಾತಕೆ ನಿನ್ನನು ಕರೆದೇ। ಘಾತಿಸಲೂ ತಾ ಬರಿದೇ॥ಭೂತಪತೇ ಕರುಣವನೂ। ನೀ ತೊರೆಯೇ ಇನ್ನೇನೂ ॥ ೩ ॥

॥ ಭಾಮಿನಿ ॥

ಈ ಪರಿಯೊಳಳಲುವ ಧರೇಶನ । ತಾಪವನು ಕಂಡಾಗ ಭದ್ರನು॥ ಕೋಪಿಸುತಲಿಂತೆಂದ ಮರುಳು ನೃಪಾಲ ಕೇಳಿತ್ತಾ ॥ ಈ ಪೆಣನ ಮೇಲ್ಬಿದ್ದು ಸುಮ್ಮನೇ। ನೀ ಪ್ರಳಾಪಿಸಲೇಕೆ ಕರಗಳ । ಚಾಪಕೋಲ್ಗಳ ಬಿಸುಟೆಯೋ ಯೆನಲೆಂದ ಘರ್ಜಿಸುತಾ ॥ ೧ ॥

॥ ರಾಗ, ಶಂಕರಾಭರಣ, ಮಟ್ಟಿತಾಳ ॥

ಖಳಧರಾಧಿಪಾ । ವದರಲೇತಕೇ । ಕಳೆವೆ ನಿನ್ನನೂ ನಿಮಿಷ ಮಾತ್ರದೀ ॥ ಜಲಜಸಂಭವಾ । ಬರಲು ಗೆಲುವೆನೂ । ಕಲಹಮಧ್ಯದೀ। ಯೆನುತ ನುಡಿದನೂ ॥ ೧ ॥ ಧಾತ್ರಿಪಾಲನೇ । ಕೇಳುನಿನ್ನಯಾ । ಮಿತ್ರನೋರ್ವನೂ ಕಾದಿ ರಣದೊಳು ॥ ಪೃಥ್ವಿಗೊರಗಿಹಾ। ನವನ ತೆರದೊಳೂ। ಮಿತ್ರಸುತನಿಗೇ ನಿನ್ನ ಕಳುಹುವೆ ॥ ೨ ॥ ಹುಚ್ಚುಭೂಪನೆ । ಬರಿದೆ ನುಡಿಯನೂ । ವೆಚ್ಚಗೈವೆಯಾಕೀಗನಿನ್ನನೂ ॥ ನುಚ್ಚುಗೈಯುವೇ । ನೆನುತ ಕಣೆಗಳಾ । ನೆಚ್ಚಡಾನೃಪಾ ತರಿವುತುರುಶರಾ ॥ ೩ ॥ಮತ್ತೆ ರೋಷದೋ। ಳೌಡುಗಚ್ಚುತಾ। ಎತ್ತಿ ಹೊಡೆಯಲಾ ನೃಪಗೆ ಶರವನೂ॥ನೆತ್ತಿತಿರುಗುತಾ । ಬಳಲಿ ಕಣದೊಳೂ। ಮರ್ತ್ಯಪಾಲನೂ ಬಿದ್ದ ಧರೆಯೊಳೂ ॥ ೪ ॥

॥ ವಾರ್ಧಿಕ್ಯ ॥

ಕ್ಷೋಣೀಶ ಕೇಳು ದೃಢವರ್ಮ ಪುನರಪಿ ಹತಿಗೆ। ತ್ರಾಣಗುಂದುತ ಮೂರ್ಛಿಸಲ್ಕೆ ಭದ್ರಾಖ್ಯ ನೃಪ । ಕಾಣುತಿದನಾಗ ತೋಷಿಸಿ ಬಂಧನೆಯೊಳಿರುವ ಚಿತ್ರಕೇತನನು ಕರೆಸೀ ॥ ಕ್ಷೀಣಪಟ್ಟಿಹ ತರಳನನು ಕಂಡು ನರಪ ದು। ಮ್ಮಾನ ತಾಳುತ ನುಡಿದ ಕುವರ ಕೇಳೆನಗಾಗಿ । ಬಾಣಹತಿಯಿಂದಧಿಕ ಕಷ್ಟಬಟ್ಟೆಯೊ ಯೆನುತ ಮಮತೆಯಿಂದುಪಚರಿಸಿದಾ ॥ ೧ ॥

॥ ರಾಗ, ಭೈರವಿ ಝಂಪೆತಾಳ ॥

ಕಂದ ಕೇಳೆನಗಾಗೀ । ಬಂದೂ ಕಾಳಗದಿ ಬಲೂ । ನೊಂದೂ ಬಳಲಿದೆ ಇಂಥಾ । ಬಂಧನೆಯೋಳ್ ಸಿಲುಕೀ ॥ ೧ ॥ ಆಗಿ ಗತಿಸಿಹ ಕಾರ್ಯ । ಕ್ಕಾಗಿ ಚಿಂತಿಸಲು ಫಲವಾಗುವುದೇ ಇದರಿಂದಾ । ನೀಗಿ ಕಳೇ ದುಗುಡಾ ॥ ೨ ॥ ತರಳಾ ನಿನ್ನನು ಶೆರೆಯೋ । ಳಿರಿಸಿದ ಅಧಮನು ಧರೆಯೋ । ಳಿರಲುಂಟೇ ಜೈಮಿನಿಗೇ । ತೆರಳಿಹನೂ ರಣದೀ ॥ ೩ ॥

॥ ಭಾಮಿನಿ ॥

ಇನಿತು ತರಳನ ತಕ್ಕವಿಸುತಾ । ಜನಪನವನೊಡನೆಂದ ಕೇಳೈ । ಸನುಮತದಿ ನೀ ತೆರಳು ಮಾರ್ಬಲ ದೊಡನೆ ಪುರವರಕೇ। ಅನಿತರೊಳು

ತಾ ತರುವೆ ತರಳೆಯ|ನೆನುತ ಕಳುಹಿಸಿ ಭದ್ರಸೇನನು ! ವನಜನೇತ್ರೆಯ ತರಲು ಪೊಕ್ಕನು ರಾಜನಾಲಯವಾ || ೧ ||

|| ರಾಗ, ತೊಡೀ, ಅಷ್ಟತಾಳ ||[ಧಾಟಿ:-ಕುರುರಾಯಾ ಲಾಲಿಸಯ್ಯಾ]

ಕೇಳಿತ್ತ ಧರಣಿಪಾಲಾ | ನಿನ್ನೊಳು ನಾನು | ಪೇಳ್ವುದು ಸುಗುಣ ಶೀಲಾ || ಭೂಲೋಲಾ ಭದ್ರನಾ | ಬಾಲೆಯತರಲು ನೃ | ಪಾಲಯವನು ನಿಶಿ | ಕಾಲದಿ ಸೇರುತ್ತಾ || ೧ || ರಾಜನೋಲಗವ ಪೊಕ್ಕು | ಮೇಣಲ್ಲಿ ವಿರಾಜಿಪ ಶಿರಿಗೆ ನಕ್ಕೂ || ರಾಜೀವ ಸಖನಂತೆ | ತೇಜದಿ ನವರತ್ನ | ರಾಜಿಯಿಂದಿಹ ವೃಗ ರಾಜ ಪೀಠವನೋಡಿ || ೨ || ಅಚ್ಚರಿಯುವ ತಳೆದೂ| ವೈಭವಕಾಗಿ | ಮೆಚ್ಚಿ ಮೇಣದ ಕಳೆದೂ || ಅಚ್ಚ ಕುಸುಮಗಂಧಿ| ಗಿಚ್ಛಿ ಸುತಲಿ ನೃಪ | ಪಚ್ಚೆಗೆತ್ತಿದ ದ್ವಾರ | ಬಿಚ್ಚಿ ಮುಂದೊತ್ತುತಾ || ೩ || ರನ್ನದುಪ್ಪರಿಗೆಗೇರೀ | ನಿದ್ರಾಂಗನೆ | ಯೆನ್ನುಪ ಸಖಿಯ ಸೇರಿ || ಕನ್ಯೆ ರತ್ನಾವತಿ|ಸ್ವರ್ಣ ಪಲ್ಲಂಗದಿ|ಮುನ್ನ ವಿಶ್ರಮಿಸಿಹು|ದನ್ನು ನಿರೀಕ್ಷಿಸಿ | || ೪ || ನನೆಗೋಲನುರುಬೆಗಾಗೀ | ಭೂಮಿಪ ತನ್ನ | ಮನಸೋತು ಬಳಿಗೆ ಪೋಗಿ || ವನಿತೆಯ ಸುಂದರಾ | ನವನ ನೋಡುತ ತನ್ನೊ|| ಳಿನಿತೆಂದು ನುಡಿದನು | ಘನತೋಷವನು ತಾಳಿ || ೫ ||

|| ರಾಗ ಕಾಪಿ ಏಕತಾಳ || [ಧಾಟಿ:- ಕೀರವಾಣಿ ಮ | ಯೂರ ಗಾಮಿನಿ ||

|ಏನನುಸುರಲಿ ಮಾನಿನಿಯ|ಚಲುವಾನನದ ಪರಿಗೇ || ಮದ ಗಜ ಯಾನೆ ಕೋಕಿಲ ಗಾನೆ ಸತಿಯಾ ನೂನ ಮೊಗ ಶಿರಿಗೇ||ಮತ್ತುಂಡು| ಸೇನೆ ಯಧಿಪತಿ ಬಾನ ತ್ಯಜಿಸುತಲೀ ನಿತಂಬನಿಗೇ|| ನಿಟಲದಿ | ಸಾನುರಾಗದೊ ಳ್ತಾನೆ ಮೆರೆಯುತ ಪೂರ್ಣಕಳೆ ಯೆಸಗೇ || ಇದಕನುಮಾನವಿಲ್ಲ ವಿದೇನೆ ನಲು ಹಗೆ | ಮಾನವಗೆ ತಾವ್|ಬೇನೆ ಪಡುವಂ|ತೀ ನಳಿನಗಳು|ನ್ಯೂನ ಗೊಂಡಿವೆ | ಹೀನಿಸುತಲಾ | ಯೇಣಧರನನೂ || ೧ || ಅಂಬುಜಾಕ್ಷಿಯು ಸಂಭ್ರಮದಿ ಮುಗುಳಂಬಿನಿಗೆ ತನುವಾ|| ಇತ್ತಾ| ಡಂಬರದಿ ತನ್ನಂಬಕಕೆ ಮರೆಗೊಂಬ ವೋಲನುವಾ || ಗೈದಿಹ | ಳೆಂಬುದಿದು ಪುಸಿಯೆಂಬರೇನೆನೆ ರಂಭೆ ತನ್ಮನವಾ || ಬೇರೊಂ | ದಿಂಬುಗೊಳಿಸುತ ಕುಂಭಿನಿಯನಕದಂಬ ದೊಳು ಚಲುವಾ || ಪುರುಷರ | ಹಂಬಲಿಸಿ ಮೇಣ್ | ಬೆಂಬಿಡದೆ ತರೆ | ಕಂಬು ಕಂಠಿನಿ | ತುಂಬಿರುವ ನಗೆ| ಯೆಂಬ ಬಲೆಯ ಸೌ | ರಂಭದೊಳು ತಾ | ಹಂಬಿಸಿಹಳಾ | ರಂಭದಲ್ಲಿಯೆ || ೨ || ನಾರಿ ರತುನೆಯ ಚಾರು ವದನದಿ ಬೀರುವಳೆ ನಗೆಯೂ || ಕುಂದಲ್ | ಕಾರಣಂಗಳು ಬೇರೆ

ಮನಸಿಗೆ ತೋರದೀ ಬಗೆಯೂ । ಬಳಿಕಾ । ವಾರಿಜಾಕ್ಷಿಯ ಮೋರೆ ತೊರೆದಿಹ ಭೂರಿ ಸ್ಮಿತ ಬಲೆಯೂ ॥ ಯೆನ್ನನು । ಸೇರಿ ಸುತ್ತುತ ದಾರಿ ಗೆಡಿಸೀ ನೀರಯೆಡಗೊಯ್ಯು ॥ ತ್ವರಸಿಯು । ಕಾರ್ಯ ಕೆಡದೋಲ್ । ತಾರೆಯಧಿಪಗೆ । ಪೂರ ಒಪ್ಪಿಸೆ । ಧೀರತನ್ನನು । ಸೂರೆಗೊಂಡಿಹ। ಭಾರಿ ಬಳಲಿಸಿ । ಯಾರಿಗೊರೆಯಲ । ಪಾರ ಕಷ್ಟವಾ ॥ ೩ ॥

॥ ಕಂದಪದ್ಯ ॥

ಕೇಳವನಿಪ ಭದ್ರಾಖ್ಯಂ । ಬಾಲೆಯನೀಪರಿ ವರ್ಣಿಸಿ ಸುಮಶರದುರಿಯಂ ॥ ತಾಳದೆ ಮತ್ತಿಂತೆಂದನು । ಲೋಲಾಕ್ಷಿಯ ಸುಂದರ ತನುವಿನ ಸೌರಭಕಂ ॥ ೧ ॥

॥ ರಾಗ ಯಮುನಾ ಕಲ್ಯಾಣಿ, ಅಷ್ಟತಾಳ ॥ [ಧಾಟಿ:- ಸ್ವಾರಿ ಯೆಲ್ಲಿದು ದೂರ ಯೆಲೆ ॥

ಅಮಮ ಯೇನ್ ಬೆಡಗುಗಾತ್ರಿಯೊ ಕನ್ಯೇ । ಕಾಣೆ । ಕಮನೀಯ ಗಾತ್ರೆ ಮನ್ಮಥ ರನ್ನೇ ॥ ಪಲ್ಲ ॥ ಭುವನ ಸ್ತ್ರೀ ನಿಕುರಂಬ ವನದಲ್ಲೀ । ಇಂಥ । ನವ ಮೃದುಲತೆಯನ್ನು ಇಹುದೆಲ್ಲೀ ॥ ದಿವರಾಜನೆಂತು ಬಂದಿಹ ನಿಲ್ಲೀ । ಯೆಂದು । ತವೆಶಂಭಿತೋರ್ಪುದು ಮನದಲ್ಲೀ ॥ ೧ ॥ ನಾಗ ವೇಣಿಯು ಮುದ್ದು ಮೊಗಕಾಗೀ । ಮೇಲ್ವೈ । ರಾಗಿಗಳ್ ಸಹ ಸೋಲ್ವ ವರ್ಣನ ನೀಗೀ ॥ ಮಾಗಿಯೊಳ್ ದಣಿದ ಪಾಂಥಿಕ ತಾನೂ । ವಮ್ಮೊ । ನಾಗ ನಡೆಯ ನೋಡೆ ತೃಷೆಯನ್ನೂ ॥ ೨ ॥ ತೊರೆವ ತಾನಿದು ಸಿದ್ಧ ವನಜಾಕ್ಷಿ । ಗೆಣೆ । ಇರದಿದು ನಿಜ ಮಾರಪಿತ ಸಾಕ್ಷೀ ॥ ಸುರ ತರುಣಿಯರಿಂಗೀ ಸೊಬಗಿನ್ನೂ । ಪೂರ । ದೊರೆವುದಸಾಧ್ಯವಾಗಿಹುದಿನ್ನೂ ॥ ೩ ।

॥ ಭಾಮಿನಿ ॥

ಬೇದಬಿಜ್ಜಗನೀ ತರುಣಿಯನು । ಸಾದರದಿ ನಿರ್ಮಿಸಿದನಿದಕಪ ॥ ವಾದವಿಲ್ಲಿದು ನಿಶ್ಚಯವು ಕರಿ ನಿಂಬ ಕುಚಯುಗೆಯಾ ॥ ಮೋದದಿಂದೊಯ್ಯುತಲಿ ಮದುವೆಯ । ನಾದೆನೆಂದರೆ ತನ್ನ ಭಾಗ್ಯಕೆ । ಮೇದಿನಿಯೊಳೀಡಿಲ್ಲವೆಂದಾ ಕ್ಷಣದೊಳಾಸತಿಯಾ ॥ ೧ ॥

॥ ವಾರ್ಧಿಕ್ಯ ॥

ಕದಲದೋಲೆತ್ತಿ ಕೊಂಡ್ಯೊದಾಗ ಮಂಚಮಂ । ವದಗಿನಿಂ ನಿಶಿಯೊಳಾ ಪುರಗಿರಿಗಳಂ ಕಳೆದು । ಪದುಮ ಸಖನುದಯದೊಳ್ ದಿಂಡೀರವೆಂಬ ವನದೆಡೆಗೈದು ಪೊರೆಯನಿಳುಹೀ ॥ ಉದಧಿವಸನೇಶ ಶ್ರಮವನು ಕಳೆಯಲೋಸುಗವೆ । ಮುದದಿ ಕುಳಿತಿರಲಿತ್ತ ನಿದ್ದೆ ತಿಳಿದೆದ್ದಾಗ । ಳದು ಭುತವಿದೇನೆಂದು ಬ್ಯಾ ಬಿಡುತ ಮರುಗಿದಳ್ ಕಡು ಭಯವ ತಾಳ್ದು ಸುದತೀ ॥ ೧ ॥

॥ ರಾಗ, ನೀಲಾಂಬ್ರಿ ಏಕತಾಳ ॥ [ಧಾಟಿ:- ನೋಡವ್ವಾ ಇಂಥಾ ಬಾಲನಾ ॥

ಹರ ಹರಾ ಕರುಣಾನಿಧೇ । ಯೇನಚ್ಚರಿ । ಯರಿಯೆನರುಹ ಬಾರದೇ॥ ಪುರವ ತ್ಯಜಿಸುತಲಿಲ್ಲಿ । ಪಲ್ಲಂಗದೊಡ । ಬರಲೇನಾರಣ್ಯದಲ್ಲೀ ॥ ೧ ॥ ಚೋರರ್ಮರ್ಗಂದಿರವ ಹೊಕ್ಕೀ । ಸುಲಿದು ಎನ್ನಾ । ಘೋರ ಕಾನನದೊಳಿಕ್ಕೀ ॥ ಸೇರಿದರೇನೊ ಹೀಗೇ । ಅಲ್ಲದಡೆನ್ನಾ । ತೀರಿಸಲ್ ನೆನೆದ ಬಗೇ ॥೨॥ ಭೂತಗಳೆನ್ನನಿಂತೂ । ಗೈದವ್ರೊಗಿರಿ । ಜಾತೆಯ ಪತಿಗೆ ಗೊತ್ತೂ ॥ ಈ ತೆರನೆಸಗುವುದೇ । ಶಿವ ಶಿವ ಎನ್ನಾ । ಘಾತಿಸದ್ಯೆದುವುದೇ ॥ ೩ ॥ ಈ ಪರಿ ದುಗುಡದಿಂದಾ । ನಾಲ್ದೆಸೆಯನು । ತಾಪದಿ ನೋಡಲ್ಲಿಂದಾ ॥ ಭೂಪನ ನೀಕ್ಷಿಸುತಾ । ಭಯದಿ ತಾಪ್ರ । ಳಾಪಿಸುತೆಂದಳ್ ಮಾತಾ ॥ ೪ ॥

॥ ರಾಗ, ಆನಂದಭೈರವಿ, ಏಕತಾಳ ॥ [ಧಾಟಿ:- ವಿಪಿನದೊಳಿರಲು ನಾ ಹಿಂದೇ ॥

ಯಾರಯ್ಯ ಮನುಜೇಶಾ ತನ್ನಾ । ಕೂಡಿ । ಕಾರಡವಿಯೊಳು ಸಂಪನ್ನಾ॥ ಕಾರಣವೇನಿಲ್ಲಿ ಬರಲೂ। ಪೇಳು। ಕಾರುಣ್ಯ ಭಾವವಿನ್ನಿರಲೂ॥ ॥೧॥ ಎನ್ನನ್ಯಾಕಿಲ್ಲಿ ನೀ ತಂದೇ । ಬೇಗ । ಎನ್ನೊಡನುಸುರೆನ್ನ ತಂದೇ ॥ ಮುನ್ನ ಘಾತಿಸುವರೆ ಮನವಾ । ಗೈದೂ । ದನ್ನರಿಯೆನು ಪೇಳು ನಿಜವಾ ॥ ॥ ೨ ॥ ತರಳೆಯೆನ್ನೊಡನೇನು ಚಿನ್ನಾ । ರತ್ನಾ । ಭರಣವೆನಿಲ್ಲಾ ಕೇಳಣ್ಣಾ ॥ ಬರಿದೆ ಕರಗಿಸಲಿನ್ಯಾಕೇ । ಪ್ರೇಮ। ವಿರಿಸುತ ಪೇಳು ಪರಾಕೇ ॥ ೩ ॥

॥ ಭಾಮಿನಿ ॥

ಧರಣಿಪತಿ ಲಾಲಿಪುದು ವನಿತೆಯು । ಸಿರಿಯ ಕರುವಾಡವನು ಸರದಿಂ । ದ್ಧರಿಧರೆಯ ಮೇಲ್ಬಿಸುಡೆ ಖಗನಿಂ ಕೆಡುವ ವ್ರೋಲ್ತನ್ನಾ ॥ ಪುರವೆನುವ ಕೊಳದಿಂದ ಬಿಡದನು । ಸರಸಿರುವ ವಿಧಿಕಿತ್ತು ವನವೆಂ । ಬುರುತರದ ಶಿಲೆಯೊಳಗೆ ಬಿಸುಟಹುದೆನುತ ಮರುಗಿದಳೂ ॥ ೧ ॥

॥ ಕಂದಪದ್ಯ ॥

ಮತ್ತಿವ ದಹಿಸುವ ತನ್ನನೆ । ನುತ್ತಾಯತಲೋಚನೆ ಚಿಂತಿಸುವದನರಿತು ನ ॥ ರೋತ್ತಮನೊಡನೆಂದ ಮುದೋ।ನ್ಮತ್ತದಿ ರತ್ನಾವತಿಯೊಡನತಿ ವಿಭವದೊಳಂ ॥ ೧ ॥

॥ ರಾಗ, ಕಲ್ಯಾಣಿ ಆದಿತಾಳ ॥ [ಧಾಟಿ:- ಮದನಮೋಹಿನಿಯೊಳಂದೂ ॥

ಬೆದರಲ್ಯಾತಕೆ ನಾರೀ । ಮಾರನ್ ಕಠಾರೀ । ಬೆದರಲ್ಯಾತಕೆ ನಾರೀ ॥ ಪಲ್ಲ ॥ ಬೆದರಲ್ಯಾಕೆ ನಾ । ಬದಿಯೊಳಿರಲು ನೀ। ನಿದ ಬಿಡು ಮನದಲಿ। ಮುದವನು ತಳೆದೂ ॥ಅನುಪಲ್ಲ॥ಮದಿರಲೋಚನೆ ನಿನ್ನ। ಸೊಬಗನೊಮ್ಮೆ।

ಬುಧರು ಪೇಳಲು ಚಿನ್ನಾ || ಪದುಮಗಂಧಿನಾ | ನಿದಕೋಸುಗ ಕದನದಿ ನೃಪನೊಳು ಕಾ! ದಿದುದೆಲೆ ರಮಣೀ ||೧||ಕಲಹದಿ ಗೆಲಿದಿತ್ತಾ | ತಂದಿಹೆ ನಿನ್ನಾ | ಕೊಲುವರಲ್ಲಿದು ಚಿತ್ತಾ || ಬಲುತರದೊಳು ಭ್ರಮೆ | ಗೊಳುತಿದೆ ಯುದನನು | ಗೊಳಿಸ್ಯೆ ಬೇಗನೆ ಕಲಶುಕವಾಣೀ || ೨ || ಮಾರನುರುಬೆ ತಣಿಯೆ | ಕೇಳ್ ಗುಣಮಣಿಯೇ | ದಾರಿಯೇನೆನುತರಿಯೇ || ನಾರಿಮಣಿ ನಗೆ | ಬೀರುತ ನುಡಿ ದಯ | ದೋರೆಲೆ ಎನ್ನೊಳು|ನೀರೆ ಶೃಂಗಾರೆ || ೩ || ಇಂಗಿತ ಯೆನಗುಸುರೇ | ದಣಿಸುವುದೇಕೆ | ಭೃಂಗಕುಂತಳೆ ಶೂರೆ || ಅಂಗಜ ಗಿಣಿ ಸ್ವಾ| ರಂಗನಯನೆ ಲಲಿ | ತಾಂಗಿ ಚಿಂತಿಸುವದ | ರಂಗ ವನರಿಯೇನೂ || ೪ || ಅಷ್ಟಭಾಗ್ಯವು ಎನಗೇ | ಇಹುದು ವೇಲ್ ವಿ | ಶಿಷ್ಟ ಭೂಪರು ಎನಗೇ || ಥಟ್ಟನೆ ಕಷ್ಟವ|ಕೊಟ್ಟೊಂದಿಪರಿದು / ಧಿಟ್ಟವು ನಾ ಮನ | ಗೊಟ್ಟಿಹೆ ನಿನಗೇ || ೫ ||

|| ರಾಗ, ತೋಡಿ, ರೂಪಕತಾಳ ||

ಧಾರುಣಿ ಪಾಲಾನೆಂದುದ ಲಾಲಿಸುತಲಾಗಾ | ನಾರಿಯಿಂತೆಂದಳಾ ನೃಪಗೇ||ಧೀರ ನಿನ್ನಯ ನುಡಿ ನಿಜವಾದಡೇನ್ ಗೈವೆ | ಕಾರ್ಯಸಂಗ ತಿಯು ಬೇರಿಹುದೂ || ೧ || ಪಿತ ತಾನು ಮೊದಲೇ ವತ್ಸಾಖ್ಯನಾಗಿಹ ನರ | ಪತಿಯ ನೀ ವರಿಸುವದೆನುತಾ || ಹಿತದಿ ಪೇಳಿರಲಿನ್ನಾತನ ನುಡಿಯು ಲ್ಲಂಘಿ | ಸುತಲೆಂತು ಸೇರಲ್ಯೆ ನಿನ್ನಾ|| ೨ ||ಅರಿಯದಾತನು ನೀನೇನಲ್ಲಾ ಸದ್ಧರ್ಮವ | ತೊರೆವುದಯೋಗ್ಯವೆಂದೆನುತಾ || ಪರ ಹೆಂಗಳಭಿಲಾಷೆ ನರಕಕ್ಕೊದಪುದೆಂದು | ಮರಳಿ ಪೇಳುವದೇಕ್ಕೆ ನಿನಗೇ || ೩ || ಇದರಿಂದ ಕೇಳು ನೀ ಎನ್ನನಾಶಿಸದತಿ | ಮುದದಿ ಸೋದರಿಯೆಂದು ಬಗೆದೂ || ಒದ ಗಿನೊಳ್ಕೊದೆನ್ನಾ ಸದನದಿ ಬಿಟ್ಟರೆ | ವೊದಗುವುದ್ಯೆ ಪುಣ್ಯ ನಿಜವೂ || ೪ ||

|| ರಾಗ, ಬೇಗಡೆ, ತ್ರಿವುಡೆ || ಧಾಟಿ:— ಮರೆಯಲಿನ್ನೆಂತವನಾ | ತನ್ವಿನೆಯನಾ ||

ಹೀಗೆ ಪೇಳುವರೆ ಸಖೀ | ಚಂದಿರ ಮುಖೀ | ಹೀಗೆ ಪೇಳುವರೆ ಸಖೀ || ಪಲ್ಲ || ಹೀಗೆ ಪೇಳುವದೇಕೆ ಎನ್ನೊಳು | ನಾಗಗಮನೆ ನಿರಂತ ರದಿ ಸುಖ | ಭೋಗಿಸುತಲನುರಾಗದಿಂದಲಿ | ಭೋಗಿವೇಣಿಯೆ ದಿನವ ಕಳೆಯದೇ || ಹೀಗೆ || ಅನುಪಲ್ಲ || ಚಿಕ್ಕಪ್ರಾಯದ ಕೋಮಲೇ | ಮನದಿ ವ್ಯರ್ಥ | ದುಃಖಿಸಲೇಕೆ ಬಾಲೇ || ರುಕ್ಮನೂ | ಸೋದರಿಗೆ ಚೈದ್ಯನು ತಕ್ಕನೂ | ಎಂದೆನುತ ವೈವಾಹಕ್ಕನೂ | ಗೈದಿರಲು ದುರುಳನ ಸೊಕ್ಕ ನೂ | ಮುರಿದ್ಯೊವ ತೆರದಲಿ | ರಕ್ಕಸಾರಿಗೆ ಘುಕ್ಕನೋರ್ವನೊ |

ಳೊಕ್ಕಣೆಯ ಬರೆದಿಕ್ಕಲಿಲ್ಲವೆ । ರುಕ್ಮಿಣಿಯು ತಾ ಕಕ್ಕುಲಿತೆಯಾ । ತಕ್ಕೆ ನಿನ್ನೊಳು ಸಿಕ್ಕಿಬಿದ್ದಿಹೆ ॥ ೧ ॥ ಮುನ್ನಾ ಶಕ್ರನ ಸುತನೂ । ಸೌರಿಯ ಸತಿ। ಯುನ್ನು ತಾನ್ನೊಯ್ದಿಹನೂ ॥ ಇನ್ನಿದೂ । ಅವಿಚಾರವಲ್ಲವು ಎನ್ನದೂ । ಪರ ಪುರುಷ ನಾನೆಂದನ್ನುದೂ ॥ ಚೋದಿಗದ ವಚನವು ನಿನ್ನದೂ । ಎಂತಿರಲಿ ಬಳಿಕೇ । ನನ್ನ ಯುವತಿ ನೀನೆನ್ನುವುದು ಕೇ । ಳಿನ್ನು ಮನಸಿಗೆ ತೋಚದಾ ಹುಲು । ಕುನ್ನಿ ವತ್ಸನ ಬಣ್ಣಿಸುವೆಯಾ । ಕೆನ್ನೊಳರುಹೆಲೆ ನನ್ನಿಯಿಂದಲಿ ॥ ೨ ॥

॥ ರಾಗ, ತೋಡಿ ಏಕತಾಳ ॥ [ಧಾಟಿ:- ಯಾಕೋ ನಿನಗೀ ಧೃಷ್ಟಮಾತೂ ॥

ನುಡಿಯ ಕೇಳುತೊಡನೆ ಸುದತಿ । ನಡುಗಿ ಕೋಪದಿಂದಾ ॥ ಸುಡು ಸುಡಿವನ ಧಡಿಗತನ್ನಾ । ಕೆಡಿಸುವನೆಂದೆನುತಾ ॥ ೧ ॥ ಮರುಳೆ ಕೇಳಿನ್ನರೆಯೊಳ್ನೀರ । ನೆರೆದರೇನು ಫಲವೂ ॥ ದುರುಳ ನಿನಗೀ ಪರಿಯೊಳೆರೆಯೆ । ಬರುವುದುಂಟೆ ದಯವೂ ॥ ೨ ॥ ದಶಕಂಠ ರಕ್ಕಸನು ಸೀತೆ । ಗಸುವಿತ್ತಾ ಕೀಚಕನೂ ॥ ಕುಸುಮಾಕ್ಷಿ ಸೈರೇಂಧ್ರಿಗಾಗಿ । ವುಸುರು ತೊರದ ನೀನೂ ॥ ೩ ॥ ದಾತ ಸುಕುಲ ಜಾತನೆಂಬೆ । ಮಾತಿದೆಲ್ಲಾ ಸಟೆಯೂ ॥ ಧೂರ್ತರಿರುವ ರೀತಿ ನಡವೆ! ಪಾತಕಿ ಕೇಳ್ ಧಿಟವೂ ॥ ॥ ೪ ॥ ಪರರ ಹೆಂಗಸರೊಳು ಮನವಾ । ನಿರಿಸಿ ಕುಜನರಂತೆ ॥ ನರಕದೊಳಗೆ ಹೊರಳುತಿಹುದು । ಥರವೆ ನಿನಗೆ ಭ್ರಾಂತೆ ॥ ೫ ॥

॥ ವಾರ್ಧಿಕ್ಯ ॥

ಸುದತಿ ಇಂತೆನಲಾಗ ಕೋಪಿಸುತ ಭೂಮಿಪಂ । ಹದದ ಕೂರಸಿಗೆ ಬಲಿಕೊಡುವೆನೀಕೆಯನೆನ್ನು । ತದ ನೆಗೆಯೆ ಬಳಿಕಲಶರೀರ ನುಡಿಯ್ಯಾತು ಹೆಂಗೊಲೆಯನೆಸಗದಿರೆನ್ನುತಾ ॥ ಇದನರಿಯುತಚ್ಚರಿಯಗೊಳುತಾಗ ಧಾರುಣಿಪ । ನಧಿಕ ಚಿಂತೆಯೊಳಿರಲ್ಕಿತ್ತಲಾ ಕಾನನದೊ । ಳದುಭುತಾ ರ್ಭಟೆಗೊಟ್ಟು ವನವ ಸಂಚರಿಸಲ್ಕೆ ಪೊರಟ ವಿದ್ಯುಲ್ಲೋಚನಾ ॥ ೧ ॥

॥ ಕಂದಪದ್ಯ ॥

ಚರಿಸುತ ಕಾನನವನು ನಿಶಿ । ಚರನಿವರಿರ್ಪೆಡೆಗತಿ ವಹಿಲದಿ ಬಂದೀಕ್ಷಿಸಿ ಹರಿದಿವರಂ ತಿಂಬುವೆನೆನು । ತ್ಥರಿನಾದದೊಳಿಂತೆಂದನು ಘರ್ಜಿಸುತಾಗಂ ॥ ೧ ॥

॥ ರಾಗ, ಮಾರವಿ, ಅಷ್ಟತಾಳ ॥

ಆರೆಲೋ ಮನುಜಾ । ಬಂದಿರುವವ । ನ್ಯಾರೆಲೋ ಮನುಜಾ ॥ ॥ ಪಲ್ಲ ॥ ಆರೋ ಸುಮ್ಮನೆ ಹುಲಿಯ ತುತ್ತಿಗೆ । ಹಾರಿ ಬಂದಿಹ ಕುರಿಯ ತೆರದಲಿ ॥ ನಾರಿಯನು ಒಡಗೊಂಡು ಯಮನೆಡೆ । ಸೇರುವರೆ ಸರಿಯಾಗಿ

ಬಂದವ । ನ್ಯಾರೆಲೋ ಮನುಜಾ ॥ ಅನುಪಲ್ಲ ॥ ಮನುಜರ ಮಾಂಸವ ಮೆಲದೇ । ಬಲು । ದಿನವಾಯ್ತು ನಾನಿಲ್ಲಿ ಬರದೆ ॥ ಮನಕೆ ತೋಷವದ್ಯಾತು ಬಲು ಪರಿ । ಕ್ಷಣಕೆಹಿಡಿತಂದೀಕೆಯನು ನಾನ್ । ಮನೆಗೆ ಕೊಂಡ್ಯೊದಿಡುವೆ ಕೊಬ್ಬಿಸಿ । ಘನದಿ ಭೋಗವ ಗೈವೆನಂತರಾ ॥ ೧ ॥ ಅಲ್ಲದಿರಲು ಲಗ್ನ ಗೈದೂ । ಸುಖ । ದಲ್ಲಿ ಮನೆಯೊಳಿಟ್ಟು ನಲಿದೂ ॥ ವಲ್ಲಭೆಯ ತಾ ಮಾಡಿಕೊಳುವೆನು । ಮೆಲ್ಲಲೆಂತೀಯಧಮನಿರುತಿಹ । ಚಲ್ವಪಾಕವನೆಸಗುವೆನು ತೊಡು ನಿಲ್ಲದಿವನನು ಕೊಲ್ಲದೀಕ್ಷಣಾ ॥ ೨ ॥

॥ ಭಾಮಿನಿ ॥

ನಿಶಿಚರನು ಹೀಗೆನಲು ಕೇಳ್ದಾ । ಶಶಿಮುಖಿಯು ಭಯಗೊಂಡಿರಲು ಬಳಿ । ಕಸಮ ಸಾಹಸಿ ಸಾಯಕಂಗಳ ಧರಿಸಿ ಪೊರಟಾಗಾ ॥ ಉಸುರಿದನು ಇನಿತ್ಯಾಕೆ ಘರ್ಜಿಪೆ । ನುಸಿಯೆ ಗರ್ವವ ನಿಲಿಪೆನೆನುತಲಿ। ಮಸೆದ ಬಾಣವ ಬಿಡಲು ಖಳನಿಂತೆಂದ ರೋಷದಲೀ ॥ ೧ ॥

॥ ರಾಗ, ಮಾರವಿ, ಏಕತಾಳ ॥

ನರಗುರಿ ಕೇಳೆಲೊ / ಬರಿದ್ಯಾತಕೆ ಶರ । ಸರಿಮಾಡುವೆ ಮರುಳೆ॥ ಧುರದೊಳು ಎನ್ನಲಿ । ಸರಿನಿಲ್ಲುವರೀ । ಧರಣಿಯೊಳ್ಯಾರುಸುರೂ ॥ ೧ ॥ ಖೂಳ ಖಳಾಧಮ । ತಾಳೆಲೊ ನಿನ್ನೆದೆ । ಸೀಳುತ ರುಧಿರದೊಳು ॥ಕಾಳಿಯನೋಕುಳಿ । ಕೇಳಿಪಡುಸುರುವೆ । ಮೂಳನೆ ಬ್ಯಾಮುಚ್ಚೂ॥ ೨ ॥ಖುಲ್ಲ ಮನುಜ ಬರಿ । ಝುಲ್ಲಿನೊಳೇನ್ ಫಲ । ನಿಲ್ಲದೆ ಹಿಡಿದೀಗಾ ॥ ಚಲ್ಲಬಡಿದು ಬ್ಯಾ । ಪಲ್ಲಿಗೆ ತಗಲದೆ । ಮೆಲ್ಲುವೆ ನೋಡೆಂದಾ ॥ ೩ ॥ ಗಿರಿಗಂಹರದೊಳು । ನರಿಪಂದಿಗಳನು । ತಿರಿದಟ್ಟುತ ತಿಂದಾ ॥ ಉರವನು ಹೊಡದೀ । ಧರೆಯೊಳು ಕೆಡಹುವೆ । ಖಳ ಕೇಳ್ ಖರೆಯೆಂದೂ ॥ ೪ ॥ ಹೊಸಮಸತಿಹ ಕಣೆ । ವಿಸರದಿ ರಕ್ಕಸ । ನಸು ಕುಸಿಯುವೆನೆನುತಾ ॥ ಎಸೆಯಲು ನೋಡುತ । ನಿಶಿಚರನದರನು । ತುಸಗಣಿಸದೆ ಮುರಿದೂ॥೫॥ ರೌದ್ರದೊಳಿವನನು । ಛಿದ್ರಿಪೆನೆನುತಲಿ । ಅದ್ರಿಕುಜವ ಮುರಿದೂ ॥ ಭದ್ರನಶಿರಕಾ। ಕ್ಷುದ್ರನು ಹೊಡೆಯಲು । ಬಿದ್ದನು ರಣತಳದೀ ॥ ೬ ॥

॥ ಭಾಮಿನಿ ॥

ಧರಣಿಪತಿ ಕಾಮಿನಿಯ ಹಂಬಲ । ತೊರೆದು ಯಮುನೆಡೆ ಗೈದನಿತ್ತಲು । ಭರಿತ ತೋಷದಿ ಕರ್ಬುರನು ಸತಿಯೆಡೆಗೆ ನಡೆ ತರಲೂ ॥ ಅರಿತದನು ನೃಪಸುತೆಯು ಮನದೊಳು । ಮರುಗಿದಳು ಖಗರಾಜನಟ್ಟುಳಿ। ತೊರೆದು ನಕುಲೇಶ್ವರಗೆ ಸಿಕ್ಕಿದ ನಾಗನೋಲ್ಕಾಂತೇ ॥ ೧ ॥

॥ ರಾಗ, ಆನಂದ ಭೈರವಿ, ಏಕತಾಳ ॥

ಅಕ್ಕಟಕ್ಕಟ್ಟೈಯ್ಯೋ ಮೃಡನೇ । ರಕ್ಕಸ ಮುಂದ್ವರಿವ ತಾನೇ ॥ ಕೊಲ್ಲಲೂ । ತನ್ನಾ ಮೆಲ್ಲಲೂ ॥ ೧ ॥ ಪೊಡವಿಪ ದೃಢವರ್ಮನನ್ನಾ । ಪಡದ ಪಿತ ತಾನಾದಡೆನ್ನಾ ॥ ಬರಹವೇ । ಯೆಂತು । ಮೀರುವೆ ॥ ೨ ॥ ಯಾತಕಾಗಿ ವತ್ಸನಿಂಗೇ । ಮಾತುಕೊಟ್ಟು ಭದ್ರನಿಂಗೇ ॥ ಜರದನೂ ॥ ಪಿತನೂ । ವರದನೂ ॥ ೩ ॥ ಯಾತಕಾಗಿ ಕಾದಲ್ಬಂದಾ । ಯಾತಕಾಗಿ ತನ್ನಾ ತಂದಾ ॥ ನಿಲ್ಲಿಗೇ । ಭೂಪ । ಮೆಲ್ಲಗೇ ॥ ೪ ॥ ಬಳಿಕ್ಯಾಕೆ ರಕ್ಕಸ ತಾನಿಲ್ಲಿ । ಕಲಹಕೆನುತ ಜನಪನಲ್ಲಿ ॥ ಬರುವರೇ । ಕೊಂದೂ । ಕಳವರೇ ॥ ೫ ॥ ಭೂಪ ತನ್ನಾಗಳವ ಕಡಿಯೇ । ಕೋಪದಿಂದ ಖಡುಕ ನೆಗೆಯೇ ತಡೆವುದೇ । ಸುರರು । ನುಡಿವುದೇ ॥ ೬ ॥ ದುರುಳನೆನ್ನಾನ್ನೊದು ಕೆಡಿಸ। ದಿರಲಾರನ್ಸೈಯ್ಯಯ್ಯೊ ಕೆಲಸ ॥ ಕೆಡುವುದೂ । ಯೇನಾ । ನುಡಿವುದೂ ॥೭॥ ಮತ್ತೆ ಕೊಲುವನೇನೋ ಎನ್ನಾ । ಚಿತ್ತಚಾರಿ ಬಲ್ಲಾಮುನ್ನಾ ॥ ಬಿಡುವನೇ । ಆಳ । ದಿರುವನೇ ॥ ೮ ॥

॥ ವಾರ್ಧಿಕ್ಯ ॥

ಜಯ ಜಯ ಜಗನ್ನಾಥ ಜಾನಕೀ ಸುಪ್ರೀತ । ಜಯ ಜಯ ಚಿದಾನಂದ ವಂದ್ಯಸುಮನಸ ವೃಂದ । ಜಯ ರುಕ್ಮಿಣೀ ರಮಣ ಜಯ ಕೌಸ್ತುಭಾಭರಣ ಜಯ ಖಳಸ್ತೋಮ ಭೀಮಾ ॥ ಭಯ ದೂರ ನೀ ಎನ್ನ ಭವಣೆಯನು ಪರಿಹರಿಸು । ದಯ ತೋರು ಕರುಣವಾರಿಧಿ ತನ್ನ ಬಿಡದೆ ಚಿನ್। ಮಯ ಮೂರ್ತಿ ಕಾಯುತೀ ಖಳನಬಾಧೆಯ ಬಿಡಿಸು ಪದುಮನಾಭನೆ ದಯದೊಳೂ ॥ ೧ ॥

॥ ಭಾಮಿನಿ ॥

ವಾರಿಜಾಕ್ಷನೆ ದ್ರೌಪದಿಯ ನೀ । ಭೂರಿ ಕರುಣದಿ ಕ್ಯಾದೆ ಸುಮನಸ । ವಾರವನು ಸಲಹಿರುವೆ ದಶಕಂಠನನು ಕಳೆದೀಗಾ ॥ ನಾರಿಯೊಬ್ಬಳ ಸಲಹುವುದು ಬಲು । ಭಾರವೇ ಗೋವಿಂದನಿನಿತಿರೆ । ಮಾರಪಿತ ಬಿಡದೀಗ ಪ್ರಾಣವ ಕಾಯೋ ಮುರಹರನೇ ॥ ೧ ॥

॥ ರಾಗ, ಶಂಕರಾಭರಣ, ತ್ರಿವುಡೆತಾಳ ॥

ಸುದತಿ ಈ ತೆರದಿಂದ ಚಿಂತಿಸಿ । ಮಧು ರಿಪುವ ನೆನೆಯುತ್ತಿರೇ ॥ ಇದಿರು ಬಂದಾದುರುಳ ರಕ್ಕಸ । ವಿಧುಮುಖಿಯೊಳಿಂತೆಂದನೂ । ಕೋಪದಿಂದಾ ॥ ೧ ॥ ಕೊಮಲಾಂಗಿಯೆ ನಿನ್ನ ಪೆತ್ತಿರು । ವಾಮಹಿಮನ್ಯಾರೆನ್ನುತಾ । ಪ್ರೇಮದಿಂದಲಿ ಪೇಳು ಮದಗಜ । ಗಾಮಿನಿಯೆ ಬಿಡು ಚಿಂತೆಯಾ ।

ಎನ್ನೊಳೀಗಾ ॥ ೨ ॥ ಇತ್ತ ಕೇಳ್ ಹರಿಣಾಕ್ಷಿ ಎನ್ನನು । ಚಿತ್ತ
ಜನು ಬಲು ತೆರದೊಳೂ ॥ ವ್ಯರ್ಥ ಬಳಲಿಪನಿದಕೆ ಶಮನವ । ಬಿತ್ತರಿಸು
ನೀ ಎನ್ನೊಳೂ । ಕರುಣದಿಂದಾ ॥೩॥ ತನು ಸುಖವ ಪಡೆಯಲ್ಕೆ ನಿನ್ನಲಿ ।
ಮನವ ಮಾಡಿದುದಲ್ಲದೇ ॥ ಕೊಲುವದಿಚ್ಛಿಪುದಲ್ಲನಾರೀ । ಮಣಿಯೆ
ಭಯವನು ತೊರೆಯುತಾ । ಮೊಗವ ನೆಗೆಹೂ॥ ೪ ॥ಬಳಿಯೊಳಿಹ ಮನು
ಜಾಧಮನು ತಾ । ನೆಲವ ತೊರೆಯುತಲೆಮನೆಡೇ ॥ ನಲವಿನಿಂದಲಿ ಪೋ
ಗಿಹನು ತಿಳಿ । ತಿಲಕ ಪುಷ್ಪ ಸುನಾಸಿಕೇ । ಪುಸಿಯಿದಲ್ಲಾ ॥ ೫ ॥ಧಡಿಗ
ನಿಂತೆನೆ ಕೇಳುತೆಲ್ಲವ । ಜಡಜಲೋಚನೆ ದುಗುಡದೀ ॥ ಅಡಗಿಸಿದಾಪತ್ತಿ
ನಲಿ ಧೈರ್ಯವ । ಬಿಡದೆ ಪೇಳ್ದಳು ರೋಷದೀ । ದಾನವನೊಳೂ ॥ ೬ ॥

॥ ರಾಗ, ಕಾಪಿ, ಝಂಪೆತಾಳ ॥

ದುರುಳ ರಕ್ಕಸ ಕೇಳು । ವರೆಯುಲ್ಯಾಕಿಂತೆನಗೆ । ದೊರೆಯುವುದೆ
ಲಾಭವೇನ್ ಹೀಗೆ ॥ ಪರಿ ಪರಿಯ ನರಕದೊಳು । ಹೊರಳುವುದು ಹಿತ
ಕರವೆ । ನರವೈರಿಯುಸುರು ಎನ್ನೊಡನೇ ॥ ೧ ॥ ಹೆಣ್ಣಿನಾಶೆಯೊಳು ನಿ ।
ನ್ನಣ್ಣ ರಾವಣ ಮಡಿದು । ಮಣ್ಣಿನ್ಹೊಂದಿಕೆಯಾದ ಬಳಿಕಾ ॥ ಮಿಣ್ಣನಾ
ದ್ರೌಪತಿಗೆ । ಕಣ್ಣಿಟ್ಟು ಕೀಚಕನು । ತನ್ನಸುವ ತೊರೆದನೇನೆನಲೀ ॥೩॥
ವಾಲಿ ರುಮೆಯನು ಮನೆಗೆ । ಲೀಲೆಯಿಂದ್ಯೊದುತಲಿ । ಕಾಲನೆಡೆಗೈದು
ದನು ಮರತೇ ॥ ಕೀಳುತನ ಗೈದು ಸುರ । ಪಾಲ ಗೌತಮನಿಂದ ।
ಹಾಳಾದ ಬಗೆ ಯೋಚಿಸೀಗಾ ॥ ೪ ॥ ತೊರೆದಿರುವ ಪ್ರಾಣವೀ । ಧರೆಯ
ಧಿಪ ಎನ್ನಕ । ದ್ದಿರದಿಲ್ಲಿ ತಂದಕಾರಣದೀ ॥ ಬರುವುದಿನ್ನವನ ಗತಿ ।
ಶರಗಿನೊಳು ಗಂಟಿಕ್ಕು । ಬರಿದೇಕೆ ಕೆಡುವೆ ಎನಲೊರದಾ ॥ ೫ ॥

॥ ರಾಗ, ಕೇತಾರಗೌಳ, ಅಷ್ಟತಾಳ ॥

ಯಾಕೆನ್ನ ನುಡಿಯ ನಿರಾಕರಿಸುವೆ ಪೇಳು । ರಾಕೇಂದು ವದನೆ
ಹೀಗೇ॥ಜೋಕೆಯೊಳುಸುರೆಲ್ಲ।ಡೀ ಕಾನನದಿ ಪ್ರಾಣ । ನೀ ಕಳ ಕೊಳುವೆ
ನೋಡೂ ॥ ೧ ॥ ಜನಿಸಿದವನು ಸಾಯ । ಲಿನಿತೆಂಬ ನೇಮವ । ವನಜ
ಸಂಭವ ನೇಮಿಸೇ ॥ ತನಗೆಂತು ಬಿಡುವುದು ।ವನಹರ್ಮ್ಯವೆಂದೆಂಬು।
ದನು ಮೃತ್ಯು ತಾ ಕಾಂಬಳೇ ॥ ೨ ॥ ಸುರನಾರಿಯರು ಕೂಡ । ಪರ
ಪುರುಷನನಿಚ್ಛಿ । ಪರು ಕೇಳು ನಾಗವೇಣಿ॥ತರವೆ ನಿನಗೆ ಎನ್ನೊ । ಳಿರು
ವುದೆ ಕುಂದುಗ । ಳರುಹು ಬೇಗದನು ಜಾಣೆ॥ ೩ ॥ದಾನವ ಕೇಳುನೀ ।
ಪ್ರಾಣವ ಕಳೆದರೂ । ನಾ ನಿನ್ನ ಸೇರಲುಂಟೇ ॥ ಹೀನ ರಕ್ಕಸ ನಿನ್ನ
ಕಾಣೆನೆನ್ನುತ ಮೊಗ । ಮಾನಿನಿ ತಿರುಹಿದಳೂ ॥ ೪ ॥

॥ ಭಾಮಿನಿ ॥

ನಾರಿ ಮೊಗವನು ತಿರುಹೆ ನೋಡುತ । ಘೋರ ವಿಸ್ಫುಲ್ಲೋಚನನು ತಾ । ಭಾರಿ ಕೋಪವ ತಾಳುತುಸುರಿದನವಳೊಡನೆ ಭರದೀ ॥ ವಾರ ವೆರಡಿತ್ತಿಹೆನು ಮನದಿ ವಿ । ಚಾರಿಸುತ ನೀ ಸಿದ್ಧಗೈವುದು । ಮಿಾರಿದಡೆ ಕಡೆಗಾಲ ತೋರುವೆನೆನುತ ಪಿಡಿದಾಗಾ ॥ ೧ ॥

॥ ಕಂದಪದ್ಯ ॥

ಅರಮನೆಗೊಯ್ಯುತ ಸತಿಯನು । ಪೊರಮುಡದೋಲ್ ಬಂಧನೆಯೊಳಗಿಡುತಾ ಕರ್ಬುರ ॥ ನಿರಲಿತ್ತಾ ವನಿತೆಯು ಬಲು । ಪರಿ ದುಃಖಿಸಿದಳ್ ಘಾತಿಪನೆನುತಂ ॥ ೧ ॥

॥ ರಾಗ, ಸೌರಾಷ್ಟ್ರ, ತ್ರಿವುಡೆ ॥

ಇನಿತು ಕಾಮಿನಿ ದುರುಳನೆಡೆಯೊಳು । ದಿನವ ಯುಗದೋಲ್ಕಳೆಯುತಿರಲಾ । ವನಿತೆ ಸುಖಿಸುವ ಕಾಲ ಬಂದುದು । ಜನಪ ಕೇಳೂ ॥ ೧ ॥ ಒಂದುದಿನ ಕೌಶಂಭಿ ಧರಣಿಪ । ನೆಂದೆನುವ ವತ್ಸಾಖ್ಯ ಸಂತಸ । ದಿಂದ ಮಂತ್ರಿಯ ಕರೆದು ಮತ್ತವ । ನೆಂದನಿನಿತೂ ॥ ೨ ॥ ಬೇಟೆಯಾಡದೆ ಬಹಳ ದಿನಗಳು । ದಾಟಿದವು ಇದಕಾಗಿ ಶಬರರ । ಕೂಟವನು ಬರ ಹೇಳು ತನ್ನಯ । ಘೋಟಕವನೂ ॥ ೩ ॥ ತರಲುಸುರೆ ಇಂತೆನಲು ಕೇಳ್ದಾ । ವರ ಸಚಿವನಾಕ್ಷಣದಿ ಕರೆಸಲು । ಪೊರಟ ಜನ ಸಂದಣಿಯು ಕೂಡುತ । ಧರಣಿಪಾಲಾ ॥ ೪ ॥

॥ ರಾಗ, ತುಜಾವಂತು, ಏಕತಾಳ ॥

ಬಂದಾ ವತ್ಸಾಖ್ಯ ಬೇಟೆಗೆಂದೂ । ಸಂತೋಷದಿಂದಾ । ಬಂದಾ ॥ ಪಲ್ಲ ॥ ಬಂದನಾಗ ಬಹು । ಮಂದಿಯು ಕೂಡುತ । ಚಂದದಿ ನರ ಪತಿ । ನಂದನನಂದೂ ॥ ಅನುಪಲ್ಲ ॥ ಹಿಡಿ ಹಿಡಿ ಕಡಿ ಹೊಡಿ । ಜಡಿ ಬಡಿ ತಡಿಯೆನು । ತೊಡನಾ ಬೇಡರ । ಫಡೆಯೆನು ನೆರಹೀ ॥ ೧ ॥ ಪದುಮಾಕರವನು । ಕದಡಿದ ಮದ ಗಜ । ವಿದು ನೆಲತರಿದೇ । ದಿದೊ ಯೆಂದೊದರೀ॥ ॥ ೨ ॥ ಕಲವಂಕಳಿ ಗಿಳಿ । ಕಲಕಂಠವು ಕೋ । ಕಿಲ ಕುಲ ಕುಕಿಲವ । ಬಲೆಯಲಿ ಕೆಡಹುತಾ । ಬಂದಾ ॥ ೩ ॥

॥ ವಾರ್ಧಿಕ್ಯ ॥

ಈ ಪರಿಯೊಳಖಿಳ ಖಗ ಮೃಗ ಸಂಕುಲವ ಕೊಲುತ । ಭೂಪ ಮುಂದೊತ್ತಿ ಬರಲೊಂದೆರಳೆ ತನ್ನಸುವ । ಕಾಪಾಡಲೋಡಿದುದು ಬಹು ದೂರವಿದ ಕಂಡು ವತ್ಸಬೆಂಬೊತ್ತುತ್ತೈದೀ ॥ ಆಪಗೆಯ ದಾಂಟ ಗಿರಿ ವರ್ಗಗಳ ಕಳಿದಿನನ । ತಾಪದಿಂ ಬಲುಬಳಲಿ ಬಾಯಾರಿ ನೆಳಲಿನೊಳು । ತಾಪವನು ಕಳೆಯಲ್ಕೆ ವಾಜಿಯುಂ ತ್ಯಜಿಸಿ ಕುಳ್ಳಿರ್ದನಾಲ್ದೆಸೆ ನೋಡುತಾ ॥ ೧ ॥

॥ ಭಾಮಿನಿ ॥

ಕಾಡ ವಿಭವಕೆ ಮೆಚ್ಚಿ ಮನದೊಳ । ಗಾಡಿದನು ಪಿಂತೀ ವಿಪಿನ ವನು । ನೋಡಲಿಲ್ಲವು ಪೊಸತೆನುತ ಮತ್ತಿರದೆ ಕಾಣುತಿರೇ ॥ ಜೋಡಿರದ ಮನೆಯೊಂದು ಕಾಣಿಸೆ । ರೂಢಿಪನು ಮಿಗಿಲಚ್ಚರಿಯೊಳಾ । ಕೂಡೆ ಮಂದಿರದೆಡೆಗೆ ತೆರಳುತಲೆಂದನೀ ತೆರದೀ ॥ ೧ ॥

॥ ರಾಗ, ಕಾಫಿ, ಅಷ್ಟತಾಳ ॥

ಏನ ಪೇಳುವೆನೀ ಸೋಜಿಗವಾ । ಇದ । ತಾನೆ ಕಟ್ಟಿಹುದ್ಯಾರೋ ತಿಳಿಯೆ ತಾ ನಿಜವಾ ॥ಏನ॥ ಪಲ್ಲ ॥ ಬಣ್ಣಿಸಲೇಸೀ ಮಂದಿರವಾ । ಬಿಡು । ಗಣ್ಣರ ಮನೆಗಿಂತ ಸೊಬಗಿನೋಳ್ ಮೆರೆವಾ ॥ ಬಣ್ಣದುಪ್ಪರಿಗೆಯ್ರ್ಯೊಭ ವವಾ । ನೋಡಿ । ತಣ್ಣಗಾಯಿತು ತೃಷೆ ಪೇಳಲೇನಿರವಾ ॥ ೧ ॥ ಅರರೆ ಯೇನಚ್ಚರಿ ಭಯದೀ । ಪೋಡಿ । ದೆರಲೆ ಬಂದಿಲ್ಯೆನ್ನ ಕಾಂಬುವ ತೆರದೀ॥ ಹೊರ ಸೋಟದಕ್ಷಿಗಳೆನಗೇ । ತೋರ್ಪ । ವರಿಯ ಬೇಕೆನುತೆಂದು ಭೂಮಿಪ ತಿರುಗೇ ॥ ೨ ॥ ಅಂಗನೆಯೆನುತ ನಿಶ್ಚಯಿಸೀ । ತಾ ಕಾ । ಳಿಂಗ ವೇಣಿಯ ಬಳಿಗಾಗಿ ಮುಂದ್ಸರಿಸೀ ॥ ಅಂಗಣವನು ಪೊಕ್ಕು ನೋಡೀ । ನೃಪ । ಪುಂಗವ ಮನದೊಳಗಿನಿತು ಮಾತಾಡೀ ॥ ೩ ॥

॥ ರಾಗ ಹಿಂದುಸ್ಥಾನಿ ಕಾಫಿ, ರೂಪಕ ॥ [ಧಾಟಿ:- ತಾಳ್ ತಾಳಿದು ಸಮಯವಲ್ಲಾ ॥

ಸರಿಯಾರಿ ತರುಣಿಮಣಿಗೇ । ವರೆಯಲೇನಿನ್ನಿವಳ ಬಗೇ ॥ ಗುರು ಕುಚಯುಗೆ ಚಂದ್ರಮುಖೀ । ಉರಗವೇಣಿ ಮದನ ಸಖೀ ॥ ಪಲ್ಲ ॥ ಭ್ರಮರಕುಂತಳೆ ಕಮಲನೇತ್ರೇ । ಅಮಿತಶೋಭೇ ವಿಮಲಗಾತ್ರೇ ॥ ದ್ಯುಮಣಿಯಂತೇ ತೇಜದಿಂದಾ । ಗಮಿಸುವಳಲ್ಯೇನು ಚಂದಾ ॥ ೧ ॥ ದಾರೊಡೆಯನೊ ದಾರ್ಪೆತ್ತನೊ । ನೀರೆ ಇವಳ ಸೊಬಗಿದೇನೋ ॥ಪೂರ್ವ ಪುಣ್ಯಾ ವಶದಿ ತನಗೆ । ತೋರಿತಲ್ಲದೆಂತು ಹೀಗೇ ॥ ೨ ॥ ಕರಿ ಗಮನೆಯು ಹೊರಗೆ ನೋಳ್ಪ । ಳೆರೆಯನೆಲ್ಯೋ ಬಾರದೀಪಾ ॥ ಸರಿಯಿದು ನೋಡು ವೆನೆನುತಾ । ಪೊರಟಾಕ್ಷಣ ಭೂಮಿಪ ತಾ ॥ ೩ ॥

॥ ಭಾಮಿನಿ ॥

ಮನೆಯೊಡೆಯರ್ಯಾರಿಲ್ಲ ಚಂದ್ರಾ । ನನೆಯು ಮಾತ್ರವೆ ಇರುವ ತೆರ ದಲಿ । ತನಗೆ ತೋರ್ಪುದು ಯೆಂತದಾಗಲಿ ಪರಿಕಿಸುವುದೆನುತಾ ॥ ಜನಪ ನುಪ್ಪರಿಗೆಯನು ಸೇರ್ದಾ । ಕನಕಪುತ್ಥಳಿಯಂತೆ ರಂಜಿಪ । ವನಜ ಲೋಚನೆಯುಳನು ಕಂಡಾ ನೃಪತಿಯುಸುರಿದನೂ ॥ ೧ ॥

॥ ರಾಗ, ಮುಖಾರಿ, ಏಕತಾಳ ॥ [ಧಾಟಿ:– ಹ್ಯಾಗೆ ಬಿಡಲಿ ನಿನ್ನೊಡನಾಟವ ಸಂ ।

ನೀರೆ ಸುಗುಣೆ ದಯದೋರುತ ಪೇಳ್ ನೀ । ನ್ಯಾರೆನುತಲಿ ಚದುರೇ॥ ನೀರಜಾಕ್ಷಿ ಮದ ವಾರಣ ನಡೆ ನಗೆ । ಬೀರುತ ನುಡಿ ಧೀರೇ ॥ ಪಲ್ಲ ॥ ಮಾನಿನಿ ನಿನ್ನಯ ಪಿತನ್ಯಾರೆನ್ನುತ । ನೀನೊರೆ ಯೆಲೆ ಜಾಣೇ ॥ ಕಾನನದೊಳಗೋರ್ವಳೆ ನೀನಿರುತಿಹೆ । ಯೇನೆನುತಲಿ ಕಾಣೇ ॥ ೧ ॥ ಮನದೊಳು ಚಿಂತಾಲತೆಯುದು ಹಂಬುತ । ಮೊನೆಗೊಂಡಿಹುದೇನೂ ॥ ಕನಕಾಂಗಿಯೆ ಮತ್ತದು ತವ ಮೊಗದೊಳು । ಮಿನುಗುವ ಬಗೆಯೇನೂ ॥ ೨ ॥ ಚಂಚಲಾಕ್ಷಿ ಬಲು ಮಿಂಚುವ ಕದಪದು । ಕೊಂಚ ಕಂದಿಹುದೇನೂ ॥ ವಂಚಕಗೈಯದಲುಸುರೆನ್ನೊಡನರ । ಸಂಚಿಗಮನೆ ನೀನೂ ॥ ೩ ॥ ಬೆದರಲೇಕೆ ನಾ ವಂಚಕನೆನ್ನುತಾ । ಪದುಮನೇತ್ರೆ ಹೀಗೆ ॥ ವಿಧುಧರನಾಣೆಯು ಕುಹಕಿಗನಲ್ಲವು । ಮುದದೊಳಗರುಹೆನಗೇ ॥ ೪ ॥

॥ ಕಂದಪದ್ಯ ॥

ಕೇಳ್ದಾ ಸುದತಿಯು ಲಜ್ಜೆಯ । ತಾಳುತ ಶಿರ ತಗ್ಗಿಸಿದುದ ತಿಳಿದಾ ಧಾರುಣಿ ॥ ಪಾಲನು ಮತ್ತಿಂತೆಂದನು । ಲೋಲಾಂಬಕಿಯುಸುರ್ಯಾವನು ತವ ಪತಿಯೆನುತಂ ॥ ೧ ॥

॥ ರಾಗ, ಬೇಗಡೆ, ಏಕತಾಳ ॥ [ಧಾಟಿ:- ಹಿಡಿರೋ । ಈ ಮಡದಿ ರತುನವನು ॥

ನುಡಿಯೇ । ನಿನ್ನೊಡೆಯನ ಪೆಸರೊಡ । ನುಡಿಯೇ ॥ ಪಲ್ಲ ॥ ಬಡನಡುವಿನಜಡ । ಪಿಡಿ ನಡೆದುಡು ಕೊಡ । ಬಿಡು ಕಡು ಬೆಡಗಿನೋ । ಳುಡುಪಡೆ ಪತಿ ಮುಖಿ ॥ ನುಡಿಯೇ ॥ ೧ ॥ ನಗೆ ಮೊಗ ನಗೆಹುತ । ಲೊಗುಮಿಗೆ ದುಗುಡಗ।ಳುಗಿ ಮೃಗದೃಗುಯುಗೆ। ಬಗೆ ಮಿಗೆ ಸುಗುಣೇ ॥ ೨ ॥ ವನಜಾನನೆ ತನು । ವನು ನನೆ ಮೊನೆಯನು । ಕುನಿಪನು ಮನವಿನಿ । ತೆನು ಘನತನದೊಳು ॥ ನುಡಿಯೇ ॥ ೩ ॥

॥ ಭಾಮಿನಿ ॥

ನಳಿನನೇತ್ರೆಯು ತಲೆಯನೆತ್ತುತ । ಬಳಿಕ ನಾಚುತ್ತಿರಲು ತಿಳಿದಾ । ಇಳೆಯಧಿಪನಿಂತೆಂದ ಕೋಮಲೆಯೊಡನೆ ತೋಷದಲೀ ॥ ಅಳುಕದಿರು ಕೇಳಬಲೆ ನಾವೇನ್ । ಕುಲಗೆಡುಕರಲ್ಯಾಕೆ ಯೋಚಿಪೆ । ಘಳಿಲನೊರೆಯೆನೆ ಸುದತಿ ವಿಸ್ತರಿಸಿದಳು ತನ್ನಿರವಾ ॥ ೧ ॥

॥ ರಾಗ, ಸಾಂಗತ್ಯ ರೂಪಕತಾಳ ॥

ಯಾರಯ್ಯ ತನ್ನೊಡ । ನೀ ರೀತಿಯೊಳು ಕೇಳ್ವ । ಕಾರಣವೇನೂ ನಾನರಿಯೇ ॥ ನಾರೀ ತನ್ನುವನು ವಿ । ಚಾರಿಸಿ ಫಲವೇನೂ । ಭಾರಿ

ದುಷ್ಕರ್ಮಿ ತಾನಹೆನೂ ॥ ೧ ॥ ಧರೆಯೊಳತ್ಯಧಿಕವಾ । ಗಿರುವಂಗ ಪಟ್ಟಣ । ಧೊರೆ ದೃಢವರ್ಮನ ಸುತೆಯೂ ॥ ಸಿರಿವಂತ ವತ್ಸನಿಂ । ಗಿರದೆನ್ನಾ ಮದುವೆಯಾ । ವಿರಚಿಸೆ ಪಿತ ನಿರ್ಣಯಿಸಿದಾ ॥ ೨ ॥ ಅಂದರೇನ್ ಗೈವುದು । ಹೊಂದಿ ಹಾ ವಿಧಿಯನ್ನಾ । ನೆಂದಿಗೂ ಬಿಡುವ ಮಾತುಂಟೇ ॥ ಬಂದೋರ್ವ ಭೂಪ ತಾ । ತಂದೆಯ ಸೋಲಿಸಿ । ತಂದಾಕದ್ದೆನ್ನನೀ ವನಕೇ ॥ ೩ ॥ ಬಳಿಕೋರ್ವ ರಕ್ಕಸ । ಕಲಹದಿ ಜನಪನಾಕೊಲುತೆನ್ನಾ ಕೆಡಿಸಲೆಂದೆನುತಾ ॥ ಹಲವಂಗ ಯತ್ನಿಸೆ । ಫಲಸಿಗದಿರೆ ಮತ್ತೀ । ನಿಳೆಯದಿ ತಂದೂ ಬಂಧಿಸಿಹಾ ॥ ೪ ॥ ಜೀವಗೊಳ್ಳುವ ತನ್ನಾಕ್ಕಾವರಿನ್ಯಾರಿಹರ್ । ಹಾ ವಿಧಿಯನು ಮೀರಲೆಂತು ॥ ಭೂವರವತ್ಸನಿಂ । ನ್ಯಾವನೆಲ್ಲಿಹನಿದ । ನೀವರಿವಿರೆ ದಯಮಾಡೀ ॥ ೫ ॥ ಧರಣಿಪ ವತ್ಸನ । ಮರೆಯೊಳಿರದೆ ಬ್ಯಾರೆ । ಕುರಿಗಳನಿಚ್ಛಿಪುದುಂಟೆ ॥ ಹರಣವ ತೆಗದರೀ । ದುರುಳನ ಸೇರುತ । ಲಿರಲುಂಟೆ ಜಗದಿ ಬಾಳುತಲೀ ॥ ೬ ॥

॥ ವಾರ್ಧಿಕ್ಯ ॥

ಮತ್ತೆ ಕೇಳ್ ಸುರವೈರಿ ವನಕೆ ತೆರಳಿಹನವನು । ಗೊತ್ತು ಬರುವನು ನಮ್ಮ ಕಂಡು ಕೊಲ್ಲದಡವಗೆ । ಹೊತ್ತು ಹೋಗದು ನೀನು ಕೆಡಲೇನು ಫಲವಿಹುದು ತೆರಳಯ್ಯ ನಿನ್ನ ಗೃಹಕೆ ॥ ಮತ್ತಕಾಶಿನಿ ಇನಿತು ಪೇಳಿದುದ ಕೇಳ್ದಾನ । ರೋತ್ತಮನು ಮನಮರುಗುತಾ ಸುದತಿಯನು ತಾನು । ಯೆತ್ತಿ ತೊಡೆಯೊಳ್ಕುಳ್ಳಿರಿಸಿ ಪೇಳ್ದ ತನ್ನ ನಿಜ ಪರಿಯ ಮಾಜಿಸದೆ ನೃಪತೀ ॥ ೧ ॥

॥ ರಾಗ, ಸುರುಟಿ, ಏಕತಾಳ ॥ [ಧಾಟಿ: ·ಕೋಮಲಾಂಗಿ ಕೇಳೆ ]

ಸುದತಿ ಶಿಖಾಮಣಿಯೇ । ಪೇಳುವೆ । ನಿದೊ ಮನ್ಮನ ಕಣಿಯೇ ॥ ಚದುರೆ ನೀನೆನಗಾ । ಗ್ಯಧಿಕ ಭವಣೆ ಪಟ್ಟುದರಿಂ ದುಃಖಿಪೆ । ನಿದನೇನೆನಲೀ ॥ ೧ ॥ ವತ್ಸನೆನಲು ನಾನೇ । ಬೇಟೆಗೆ । ಉತ್ಸಹದೊಳು ಕಾಣೇ ॥ ಮತ್ತೀ ವಿಪಿನಕೆ । ಚಿತ್ತೈಸಿದೆ ಮೃಗ । ದೊತ್ತಿನೊಳ್ಳೈ ತಂ । ದಿತ್ತೆನು ದರ್ಶನ ॥ ೨ ॥ ದುರುಳನು ಕಡು ಭಯಕೇ । ದುಃಖಿಸ । ದಿರು ನಾನೀಕ್ಷಣಕೇ ॥ ತರಿದಟ್ಟುವೆನೆಮಪುರಿಗವನನು ಚಂ । ದಿರ ಮುಖಿ ನಿನ್ನನು । ಕರೆದೊಯ್ಯುವೆನೂ । ೩ ॥

॥ ಭಾಮಿನಿ ॥

ಕೇಳುತಾಯತ ನೇತ್ರೆ ವತ್ಸ ನೃ । ಪಾಲನನು ಬಿಗಿದಪ್ಪಿ ಸಂತಸ । ತಾಳಿದುದನೊರೆಯಲ್ಕೆ ಫಣಿಪನಿಗಸದಳವು ನೃಪತೀ ॥ ಲೀಲೆ ಮಿಗೆ ಘಟಎರಡ ಕಳೆಯಲ್ । ಖೂಳನಿತ್ತಲು ನಡೆತರುತ ಕಡೆ । ಗಾಲ ಬಂದಿಹುದರಿಯದಾ ಗಂಧರ್ವನನು ನೋಡೀ ॥ ೧ ॥

॥ ಕಂದಪದ್ಯ ॥

ನಿರ್ಜರರೆದೆ ಕಂಪಿಸಿವ್ರೋಲ್ । ಘರ್ಜಿಸಿ ವಿದ್ಯುಲ್ಲೋಚನನೊಳ ಪ್ರೊಗುತಾಗಂ ॥ ತರ್ಜಿಸಿ ಶರ ಬಿಡುತೆಂದನು । ದುರ್ಜನ ಕೇಳೀತಕೆ ಬಂದಿರುತಿಹೆ ಎನುತಂ ॥ ೧ ॥

॥ ರಾಗ, ಸುರುಟಿ, ಮಟ್ಟೆ ತಾಳ ॥

ಆರೆಲೊ ಹುಡುಗಾ । ಸೇರಿದೆ ಧಡಿಗಾ । ಚೋರರ ತೆರದೊಳಗರ ಮನೆ । ಸೂರೆಗೈಯ್ಯಲು ಬಂದಿಹು । ದ್ಯಾರೆಲೋ ಹುಡುಗಾ ॥ ಪಲ್ಲ ॥ ಅಡುಂಬುವ ತರಳನೆ ಈ । ಕಾಡಿಗೆ ಬಂದ್ಯಾಕೇ ॥ ವೋಡಿಯೊಳರಮನೆ ಹೊಕ್ಕಿಹೆ । ನೋಡಿಕೊ ತನುಜೋಕೇ ॥ ೧ ॥ ಉರವನು ಬಗೆಯುತ ನಿನ್ನನು । ತರಣಿಯ ಸುತನೆಡೆಗೇ ॥ ತೆರಳಿಸುವೆನು ಎನುತಲಿ ಪಲ್ ॥ ವೊರೆಯುಲು ಸತಿ ನಡುಗೇ ॥ ೨ ॥ ಮುಚ್ಚೆಲೊ ಬ್ಯಾ ಖಳ ರಕ್ಕಸ । ತುಚ್ಛಿಯೊಳ್ ಫಲವೇನೂ ॥ ಕೊಚ್ಚುವೆ ನೋಡ್ ನಾಲಗೆಯನು । ಬಿಚ್ಚುವೆನೆದೆಯನ್ನೂ ॥ ೩ ॥ ಹಿಡಿದಪ್ಪಳಿಸುತ ನಿನ್ನನು । ಕಡಲಿಗೆ ಬಿಸುಟೇಗಾ । ಹುಡುಗಿಯ ಕರೆದೊಯ್ಯುವೆ ತಾ । ನಡು ನಿಶಿಚರ ಬೇಗಾ ॥ ೪ ॥ ಭಳಿ ಭಳಿರೆನ್ನುತ ಕರ್ಬುರ । ಘಳಿಲನೆ ಮರ ಮುರಿದೂ ॥ ತಲೆಯೊಳು ಹೊಡೆಯಲ್ಕಂಡಾ । ಬಲವಂತನು ತರಿದೂ॥ ೫ ॥ಧರಣಿಪ ರೋಷವ ತಾಳುತ। ಶರವನು ಸುರರಿಪುಗೇ ॥ ಭರದಿಂದೆಸೆಯಲು ದಾನವ । ತೆರಳಿದನೆಮಪುರಿಗೇ ॥ ೬ ॥

॥ ಭಾಮಿನಿ ॥

ಸುದತಿಯನು ವಂಚಿಸುತ ತಂದಿರು । ವಧಮರೆಂತೀ ಧರೆಯೊಳಿಪ್ಪರು । ಕದನದೊಳು ಕಡೆ ಸೇರಿದರು ಬಳಿಕಿತ್ತ ತೋಷದಲೀ ॥ ಪದುಮನೇತ್ರೆಯು ವಿನಯದಿಂ ನರ । ರಧಿಪ ಕರಕೊಳುತಾಗ ತನ್ನಯ ॥ ಕುದುರೆಯನು ಸತಿಯೊಡನೆ ಏರುತ ಬಲದೆಡೆಗೆ ಬಂದೂ ॥ ೧ ॥

॥ ಕಂದಪದ್ಯ ॥

ಮನ್ನಿಸಿ ಶಬರರ ನೀವ್ ಪೋ । ಗೆನ್ನುತ ಕಳುಹಿಸಿ ತನ್ನಯ ಮಾರ್ಬಲ ದೊಡನಂ ॥ ಸನ್ನುತ ದೃಢವರ್ಮನ ಬಳಿಗಿನ್ನೀವರ್ಗರು ಪೊರಟ್ಟೆ ತಂದರು ಬಲು ಜವದಿಂದಂ ॥ ೧ ॥

॥ ರಾಗ, ಭೈರವಿ, ಝುಂಪೆತಾಳ ॥

ಚಿತ್ತವಿಸು ಶ್ರೀಹರ್ಷ । ನಿತ್ತವತ್ಸಾಖ್ಯ ಜನ । ಪೋತ್ತಮನು ನಡೆ ತರಲಿ । ನ್ನತ್ತ ದೃಢವರ್ಮ ॥ ೧ ॥ ನಿದ್ದೆಯನು ತಿಳಿದು ತಾನೆದ್ದು ನೋಡುತ ತನ್ನ ॥ ಮುದ್ದು ಮಗಳನು ವೈರಿ । ಕದ್ದೊಯ್ದನೆನುತಾ ॥ ೨॥ ಕಂಗೆಟ್ಟು ಬಳಲಿಹಲ । ವಂಗ ಚಿಂತಿಸುತ ಸುತೆ । ಯಂಗವನು ನೆನೆ ನೆನೆಯು। ತ್ತುಂಗ ಜನಪಾಲಾ॥ ೩ ॥ಇರಲಿತ್ತಾ ಕ್ಷಣ ಬಂದೂ । ಚರರೂ ಪೇಳ್ದರು ನವ್ಮಾ । ಪೊರ ಬಾಗಿಲೊಳಗೋರ್ವ । ತರಳೆಯನು ಕೂಡೀ॥ ॥ ೪ ॥ ಬಂದಿರುವನೆನಲು ನೃಪ । ನೆಂದನವರಿಗೆ ಸಭೆಯ । ಹೊಂದಬಿಡ ಬಹುದೆನಲಾ । ನಂದದಿಂ ಚರರೂ ॥ ೫ ॥ ಪೇಳಿದರು ಒಳಗೆ ಪೋ।ಗ್ಯೇಳೆಂದುದನು ತಿಳಿದು । ನೀಲಕುಂತಳೆ ಸಹಿತ । ಲೋಲ ವತ್ಸಾಖ್ಯಾ ॥ ೬ ॥

॥ ವಾರ್ಧಿಕ್ಯ ॥

ನಡೆ ತಂದು ಭೂಮಿಪಗೆ ವಂದಿಸಲು ತಿಳಿದಾಗ । ದೃಢವರ್ಮ ತೋಷಾಬ್ಧಿಯೊಳಗಾಡೆ ಪರಿವಾರ । ಜಡಜ ಮುಖಿ ಸೌರಂಭೆ ಸಹಿತಲಾನಂದವನು ಪಡೆದುದನು ಪೇಳಲೆಂತೂ ॥ ಒಡನೆ ವತ್ಸನ ಮನ್ನಿಸುತ ಕುವರಿಯನು ಕೇಳು।ತಡಸೀರ್ದ ಕಷ್ಟಕತಿ ದುಃಖಿಸಲು ನರಪತಿಯು । ನುಡಿದಳಾ ಸುದತಿ ಚಿಂತಿಪುದೇಕೆ ವಿಧಿಲಿಪಿಯ ಮೀರಲಾರಳವು ಜಗದೀ ॥ ೧ ॥

॥ ರಾಗ, ಮುಖಾರಿ, ಝುಂಪೆತಾಳ ॥

ವ್ಯರ್ಥ ಚಿಂತಿಪುದೇಕೆ । ಮನದಿ ಜನಪಾ।ಕರ್ತನಪ್ಪಣೆಯಂತೆ । ವರ್ತಿಸಿದೆ ನಾನಿದಕೆ ॥ ವ್ಯರ್ಥ ॥ ಪಲ್ಲ ॥ ಲೋಕೇಶನೆಪ್ಪಣೆಯ । ಲೋಕದೊಳು ಮೀರ್ವರ್ಯಾ । ರ್ಯಾಕಿನಿತು ಯೋಚಿಸುವೆ । ಯೇ ಕೃಪಾಳೂ ॥ ಸಾಕಿ ಸಲಹಿದೆನೆನುತ । ಶೋಕಿಸುತಲಿರಲು ವಿಧಿ ! ತಾ ಕರುಣದೋರುವುದೆ । ಘಾಕದಲ್ಲೈ ॥ ವ್ಯರ್ಥ॥ ೧ ॥ಸೀತೆಯೆಂದೆನೆ ತ್ರಿಜಗ । ಮಾತೆಯೆನಿಸಿಹಳವಳ । ಯಾತು ದಾನವನ್ಯೊದ । ರೀತಿಗೆಟ್ಟೊ ॥ ನೀತಿಯುತೆ ದ್ರೌಪದಿಯು । ಧೂರ್ತ ದುಶ್ಯಾಸನಿಂ । ದೇತರದಿ ಬಳಲಿದಳು। ಮಾತಿದೇಕೆ ॥ ॥ ೨ ॥ ಸತಿಸುತೆಯರೆಂದೆಂಬು । ವತಿಶಯದ ಭವ ಪಾಶ । ಕತಿ ಚಿಂತೆ ಪಡುವವನು । ಮತಿಹೀನನೂ ॥ ಶತಯಾಗ ಮುಖ್ಯ ಸುರ । ವಿತತಿಗಿಹುದೀ ಕಷ್ಟ । ಪಿತನೆ ಮರುಗುವುದೇನು । ಹಿತವೆಪೇಳೂ ॥ ೩ ॥

॥ ಭಾಮಿನಿ ॥

ಮಗಳಮೂತಿಗೆ ಮೆಚ್ಚಿ ಜನಪತಿ । ಮಿಗಿಲು ತೋಷವ ತಾಳಿ ಮುದ್ದಿಸಿ । ಭಗಣಪತಿ ಮುಖಿಗಾಗ ಲಗ್ನಕೆ ದಿನವ ನಿಶ್ಚೈಸೀ ॥ ಜಗದ ರಾಯರನೆಲ್ಲ ಬರೆಸುತ । ಲಗಣಿತದ ಭೂ ದಿವಿಜರಿಂದಲಿ । ನಗಹರಾದಿ ದಿವೌಕಸರು ಮನ ಮೆಚ್ಚು ವೋಲೆಸಗೀ ॥ ೧ ॥

॥ ಕಂದಪದ್ಯ ॥

ಮದುವೆಯ ಸಮಯದಿ ದ್ವಿಜರಿಗೆ । ಮುದದೊಳು ದಕ್ಷಿಣೆಯಿತ್ತಾ ಜನಪತಿ ಬಳಿಕಾ ॥ ವಧುವರರಿಗೆ ಬಳುವಳಿಯ । ನ್ನಧಿಕ ತೆರದೊಳೀವುತ ಕಳುಹಿದ ಪುರವರಕಂ ॥ ೧ ॥

॥ ಶರಶಟ್ಪದಿ ॥

ಬಳಿಕಾ ವತ್ಸನು ನಳಿನಾಕ್ಷಿಯನೊಡ । ಗೊಳುತಲಿ ಪಟ್ಟಣಕ್ಕೆ ತಂದೂ ॥ ಇಳೆಯನು ಪಾಲಿಸಿ ಕಳೆದನು ಕಾಲವ । ಜಲಜಾಕ್ಷನ ಕರುಣದೊಳಂದೂ ॥ ೧ ॥

॥ ರಾಗ, ಸೌರಾಷ್ಟ್ರ ತ್ರಿವುಡೆ ॥

ಕೇಳಿದ್ಯೆ ಶ್ರೀಹರ್ಷರಾಯನೆ । ಬಾಲೆಯೋರ್ವಳಿಗಾಗಿ ಭೂಪರು । ಕಾಳಗದಿ ಕಾದಾಡಿದುದ ನೀ । ಲೀಲೆಯಿಂದಾ ॥ ೧ ॥ ವನಜ ಮುಖಿ ಯನು ವತ್ಸ ಲಗ್ನವ ॥ ನೆನಿತೆಸಗಿಕೊಂಡೆಂಬ ಪರಿಯದು । ಮನಕೆ ಬಂತೇನೆನುತ ಕೇಳಲು । ಜನಪ ನುಡಿದಾ ॥ ೨ ॥ ಕರುಣ ವಾರಿಧಿ ನಿಮ್ಮ ದಯದೊಳ । ಗರಿತೆನೆನ್ನುತ ಪದಕೆರಗಿ ಭೂ । ವರನು ತೋಷದೊಳಿರ್ದ ನೆಂಬುವ । ಚರಿತೆ ಇದನೂ ॥ ೩ ॥ ಪಡುಗಡಲಿನ ಧಡದಿ ರಂಜಿಸ । ಉಡುಪಿ ಕ್ಷೇತ್ರದಿ ನಿಂದು ಭಕತರ । ಗಡಣ ಪಾಲಿಪ ಹರಿಯ ಕರು ಣದೊ । ಳೊಡನೆ ಇದನೂ ॥ ೪ ॥ ವಿದುಧರನ ಸದ್ಭಕ್ತ ವಿದ್ಯಾ । ನಿಧಿಗ ಳೆನಿಸುವ ಸುಬ್ಬರಾಯರ । ಪದ ಸಹಾಯದಿ ಬರೆದೆ ಗುರುವೆಂ । ಬುದನು ಬಗೆದೂ ॥ ೫ ॥ ಕುಂದು ಕೊರತೆಗಳಿದರ ಕವಿತಾ । ಬಂಧ ಛಂದಸ್ಸಿನೊ ಳಗಿರ್ದುದ । ಚಂದದಿಂ ಸಮಗ್ರೈಸಿರುವೆ ನವ । ದಿಂದಲಿದನೂ ॥ ೬ ॥ ಕರುಣದೊಳು ವಾಚಿಸುತ ದೋಷವ । ನಿರದೆ ತಿದ್ದಲು ಖ್ಯಾತಿ ಬರುವು ದು । ನರಹರಿಯು ಪೊರೆಯುವನು ಸರ್ವರ । ನಿರತ ದಯದೀ ॥ ೭ ॥

## ॥ ಮಂಗಲ ॥

॥ ರಾಗ, ಆಹೇರಿ, ಝಂಪೆತಾಳ ॥

ಶ್ರೀ ಕೃಷ್ಣನಿಗೆ ಕಮಲನಾಭನಿಗೆ । ಗಿರಿಧರಗೇ । ಲೋಕಪಾಲಕ ದೇವಕೀ ಕಂದಗೇ ॥ ಪಾಕಶಾಸನ ಮುಖ್ಯ । ದಿವಿಜಗಣ ರಕ್ಷಕಗೆ । ಕಾಕುಸ್ಥನಿಗೆ ವಿಮಲ । ವನಮಾಲಗೇ ॥ ಜಯ ಮಂಗಲಂ ॥ ೧ ॥ ಮಾರ ಪಿತನಿಗೆ ಲಕ್ಷ್ಮೀ । ನಾರಾಯಣಗೆ ಯೋಗಿ । ವಾರ ವಂದಿತ ಸದಾ । ನಂದಮಯಗೇ ॥ ಶ್ರೀರಮಾಧವ ಕರುಣ । ವಾರಿನಿಧಿ ಭಕ್ತಜನ । ವಾರಿರುಹ ತರಣಿ ಭವ । ದೂರ ಹರಿಗೇ ॥ ಮಂಗಲಂ ॥ ೨ ॥ ನಗಧರ ನಿಗಘಹರಗೆ । ಖಗರಾಜ ರೂಢನಿಗೆ । ಭೃಗುಜಗರ್ವಾಪ ಹಾರಗೆ । ಗೋಪಗೆ ॥ ಮಗುವನುದ್ಧರಿಸಿ ಮೂ । ಜಗವ ಸಲಹಿದ ಉಡುಪಿ । ಯುಗಣಿತಾನಂದ ಶ್ರೀ । ಕೃಷ್ಣಧೊರೆಗೇ ॥ ಜಯ ಮಂಗಲಂ । ನಿತ್ಯ ಶುಭ ಮಂಗಲಂ ॥ ೩ ॥ ॥ ಶ್ರೀ ॥

ಸಂಪೂರ್ಣ.